ಕೆಳದಿ ಶಿವಪ್ಪ ನಾಯಕ

ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಕೃಷಿ ಮತ್ತು ತೋಟಗಾರಿಕಾ ಮೇಳ-2023

ಸುಸ್ಥಿರ ಆದಾಯಕ್ಕಾಗಿ – ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ

# ಪ್ರಗತಿಪರ ಕೃಷಿಕರ ಯಶೋಗಾಥೆಗಳು

## ಶ್ರೇಷ್ಠ ಕೃಷಿಕ/ಕೃಷಿಕ ಮಹಿಳಾ ಪ್ರಶಸ್ತಿ ವಿಜೇತರು



**March, 2023**

ವಿಸ್ತರಣಾ ನಿರ್ದೇಶನಾಲಯ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಕೃಷಿ ಮತ್ತು ತೋಟಗಾರಿಕಾ ಮೇಳ-2023

ಸುಸ್ಥಿರ ಆದಾಯಕ್ಕಾಗಿ – ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ

# ಪ್ರಗತಿಪರ ಕೃಷಿಕರ ಯಶೋಗಾಥೆಗಳು

### ಶ್ರೇಷ್ಠ ಕೃಷಿಕ/ಕೃಷಿಕ ಮಹಿಳಾ ಪ್ರಶಸ್ತಿ ವಿಜೇತರು


ಸಂಪಾದಕರು

ಬಿ. ಹೇಮ್ಲಾ ನಾಯಕ್

ಮೃತ್ಯುಂಜಯ ಸಿ. ವಾಲಿ

ಮಲ್ಲಿಕಾರ್ಜುನ ಎಂ. ಸಿ.

ಎಂ. ಮಂಜೇಶ್

ಸಹ ಸಂಪಾದಕರು

ಬಿ. ಸಿ. ಹನುಮಂತಸ್ವಾಮಿ

ಧನಂಜಯ ಬಿ.

ಓ. ಕುಮಾರ್

ಎ. ಟಿ. ಕೃಷ್ಣಮೂರ್ತಿ



ಪ್ರಕಟಣೆ

ವಿಸ್ತರಣಾ ನಿರ್ದೇಶನಾಲಯ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

ಕೃಷಿ ಮತ್ತು ತೋಟಗಾರಿಕಾ ಮೇಳ–2023 : **"ಪ್ರಗತಿಪರ ಕೃಷಿಕರ ಯಶೋಗಾಥೆಗಳು"** ಶ್ರೇಷ್ಠ ಕೃಷಿಕ/ಕೃಷಿ ಮಹಿಳಾ ಪ್ರಶಸ್ತಿ ವಿಜೇತರ ಯಶೋಗಾಥೆ, ಪ್ರಕಾಶಕರು : **ಡಾ. ಆರ್. ಸಿ. ಜಗದೀಶ,** ಗೌರವಾನ್ವಿತ ಕುಲಪತಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

**Krushi Matthu Totagarika Mela-2023 : Pragatipara Krushikara Yashogathegalu" Shresta Krushika/Krushika Mahila Prashasti Vijethara Yashogathe** Publisher : **Dr. R. C. Jagadeesha,** Vice Chancellor, KSNUAHS, Shivamogga.

© ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ

ಸಂಪಾದಕರು : **ಬಿ. ಹೇಮ್ಲಾ ನಾಯಕ್**
**ಮೃತ್ಯುಂಜಯ ಸಿ. ವಾಲಿ**
**ಮಲ್ಲಿಕಾರ್ಜುನ ಎಂ. ಸಿ.**
**ಎಂ. ಮಂಜೇಶ್**

ಸಹ ಸಂಪಾದಕರು : **ಬಿ. ಸಿ. ಹನುಮಂತಸ್ವಾಮಿ**
**ಧನಂಜಯ ಬಿ.**
**ಓ. ಕುಮಾರ್**
**ಎ. ಟಿ. ಕೃಷ್ಣಮೂರ್ತಿ**

ಬೆರಳಚ್ಚು, ವಿನ್ಯಾಸ ಮತ್ತು
ಅಕ್ಷರ ಸಂಯೋಜನೆ : **ಶ್ರೀಮತಿ ಸುಪ್ರಿಯ ಎಂ. ಎಸ್. ಮತ್ತು ಶ್ರೀ ಯೋಗೀಶ್ ಕೆ.**

ಪ್ರಕಟಣೆ : **ವಿಸ್ತರಣಾ ನಿರ್ದೇಶನಾಲಯ**
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ
ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ

ಮುದ್ರಣ : **ಮಲ್ನಾಡ್ ಆಫ್‌ಸೆಟ್ ಪ್ರಿಂಟರ್ಸ್ & ಪಬ್ಲಿಷರ್ಸ್**
3ನೇ ತಿರುವು, ಗಾಂಧಿಬಜಾರ್, ಶಿವಮೊಗ್ಗ
ಮೊ : 94497 95464



ಡಾ. ಆರ್. ಸಿ. ಜಗದೀಶ
ಕುಲಪತಿಗಳು
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ
ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

# ಮುನ್ನುಡಿ

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಮುಖ್ಯವಾಗಿ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ ಒಳಗೊಂಡು ತನ್ನ ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿದೆ. ಉತ್ತಮ ಗುಣಮಟ್ಟದ ಶೈಕ್ಷಣಿಕ, ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ಮೂಲಕ ದೇಶದಲ್ಲಿ ತನ್ನದೇ ಆದ ಛಾಪನ್ನು ಮೂಡಿಸುವತ್ತ ಹೆಜ್ಜೆ ಹಾಕುತ್ತಿದೆ.

ನಮ್ಮ ವಿಶ್ವವಿದ್ಯಾಲಯದಿಂದ ಕೃಷಿ ಮತ್ತು ತೋಟಗಾರಿಕಾ ಮೇಳ–2023 ಅನ್ನು ಶಿವಮೊಗ್ಗದ ನವುಲೆ ಆವರಣದಲ್ಲಿ ಮಾರ್ಚ್ 17 ರಿಂದ 20 ರವರೆಗೆ "ಸುಸ್ಥಿರ ಆದಾಯಕ್ಕಾಗಿ – ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ" ಎಂಬ ಧ್ಯೇಯದೊಂದಿಗೆ ಕೃಷಿ ಮಹಾವಿದ್ಯಾಲಯ, ನವುಲೆ ಆವರಣದಲ್ಲಿ ಆಚರಿಸಲಾಗುತ್ತಿದೆ.

ಕೃಷಿಯನ್ನು ಹೊರತುಪಡಿಸಿ ಇತರೆ ಪೂರಕ ಚಟುವಟಿಕೆಗಳ ಮೂಲಕ ರಾಜ್ಯದಲ್ಲಿ ರೈತರ ಆದಾಯ ದುಪ್ಪಟ್ಟುಗೊಳಿಸಲು ಕೃಷಿಗೆ ಪೂರಕವಾಗಿ ಭಾರತ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯವನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿರುವುದು ಹೆಮ್ಮೆಯ ವಿಷಯವಾಗಿದೆ. ಪ್ರಸಕ್ತ ಕೃಷಿ ಮತ್ತು ತೋಟಗಾರಿಕಾ ಮೇಳಕ್ಕೆ "ರೈತರ ಸುಸ್ಥಿರ ಆದಾಯಕ್ಕೆ– ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ" ಘೋಷವಾಕ್ಯವನ್ನು ಇಟ್ಟುಕೊಳ್ಳಲಾಗಿದೆ. ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ವೈಜ್ಞಾನಿಕ ನೀತಿ ರೂಪಿಸಿದ್ದು, ಇದಕ್ಕೆ ಪೂರಕವಾಗಿ ಕೃಷಿ ಅಭಿವೃದ್ಧಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದ ನೀತಿ ರೂಪಿಸಲಾಗಿದೆ.

ಸೆಕೆಂಡರಿ ಕೃಷಿಗೆ ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರಾಂಡ್ ಮೂಲಕ ಮಾರುಕಟ್ಟೆಯನ್ನು ಕಲ್ಪಿಸುವುದು ಸೆಕೆಂಡರಿ ಕೃಷಿಯ ಉದ್ದೇಶವಾಗಿದೆ. ಅಂದರೆ ಕೃಷಿ ಆದಾಯವನ್ನು ಮಾತ್ರ ನಂಬಿಕೊಂಡು ನಮ್ಮ ರೈತರು ಜೀವನ ಮಾಡುವುದು ಅಷ್ಟೇ ಅಲ್ಲ,

ಅದಕ್ಕೆ ಪೂರಕವಾಗಿ ಇತರೆ ಚಟುವಟಿಕೆಗಳನ್ನು ನಡೆಸುವುದಕ್ಕೆ ಸಹ ಪ್ರೋತ್ಸಾಹ ನೀಡುವುದಾಗಿದೆ. ಇತ್ತೀಚಿನ ದಿನಗಳಲ್ಲಿ ಯುವಕರು ಕೃಷಿಯತ್ತ ಆಸಕ್ತಿ ವಹಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಯಾವುದೇ ಕ್ಷೇತ್ರ ನಿಂತರೂ, ಕೃಷಿ ಕ್ಷೇತ್ರದ ಅನ್ನದಾತನ ಸೇವೆ ನಿಲ್ಲದು ಎಂಬುದನ್ನು ಕಂಡುಕೊಳ್ಳಲಾಗಿದೆ.

ನಮ್ಮ ರೈತರ ಆರ್ಥಿಕ ಮಟ್ಟ ಸುಧಾರಣೆಗೊಳ್ಳಲು ಇತರೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರ್ಥಿಕ ಸುಸ್ಥಿರತೆಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಸ್ಥಳೀಯವಾಗಿ ಉತ್ಪಾದಿಸಲಾದ ಕಚ್ಚಾವಸ್ತುವು ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಸಂಸ್ಕರಣೆಗೆ ಒಳಗಾಗಿದ್ದರೆ, ಅಂತಹ ಕಚ್ಚಾವಸ್ತುಗಳಿಂದ ಮೌಲ್ಯವರ್ಧಿತಗೊಳಿಸುವ ಪ್ರಾಥಮಿಕ ಉತ್ಪಾದನೆಯನ್ನು ಉದ್ಯಮಕ್ಕೆ ಸರಬರಾಜು ಮಾಡಬಹುದಾಗಿದೆ. ಅಲ್ಲದೆ ಜೇನುಸಾಕಣೆ, ಜೈವಿಕ ಗೊಬ್ಬರ ಉತ್ಪಾದನಾ ಘಟಕಗಳು, ಸಾವಯವ ಗೊಬ್ಬರ–ಎರೆಗೊಬ್ಬರ ಉತ್ಪಾದನೆ, ಅಣಬೆ, ರೇಷ್ಮೆ ಕೃಷಿ, ನರ್ಸರಿ ಇತ್ಯಾದಿ ಕೃಷಿ ಸಂಬಂಧಿತ ಸಣ್ಣ ಪ್ರಮಾಣ ಚಟುವಟಿಕೆಗಳ ಮೂಲಕ ರೈತರು ತಮ್ಮ ಆರ್ಥಿಕ ಚೈತನ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ರೈತರು ಅತ್ಯಂತ ನಿಖರವಾಗಿ ರಸಗೊಬ್ಬರ ಹಾಗೂ ಕೀಟನಾಶಕ ಬಳಕೆ ಮಾಡುವಂತಾಗಬೇಕು, ಈ ವಿಚಾರದಲ್ಲಿ ತಜ್ಞರ ಸಲಹೆ ಪಡೆಯುವುದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ರೈತರು ಕೃಷಿಯ ಜೊತೆಗೆ ಪಶುಸಂಗೋಪನೆಯ ಭಾಗವಾಗಿ ಕೋಳಿ ಸಾಕಾಣಿಕೆ, ಕುರಿ–ಮೇಕೆ ಸಾಕಾಣಿಕೆಯಿಂದ ರೈತರ ಆದಾಯ ಹೆಚ್ಚಿಸುವಲ್ಲಿ ಸಹಕಾರಿಯಾಗುವುದು. ಅರಣ್ಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಜಮೀನಿನ ಬದುಗಳಲ್ಲಿ ಬಹುವಾರ್ಷಿಕ ಬೆಳೆಯಿಂದ ಆದಾಯ ಪಡೆಯುವ ಮೂಲಕ ಪ್ರಾಥಮಿಕ ಕೃಷಿಯೊಂದಿಗೆ ಸೆಕೆಂಡರಿ ಕೃಷಿಯನ್ನು ಅನುಸರಿಸುವುದು ಇಂದು ಅನಿವಾರ್ಯವಾಗಿದೆ.

ಭಾರತ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸುವ ಸಂಕಲ್ಪವನ್ನು ಕೈಗೊಂಡಿರುವುದು ನಮಗೆಲ್ಲಾ ತಿಳಿದೇ ಇದೆ. ಇದಕ್ಕಾಗಿ ಬೆಳೆ ಸುಧಾರಣೆ, ಜಾನುವಾರು ಉತ್ಪಾದಕತೆ, ಸಂಪನ್ಮೂಲ ಬಳಕೆಯಲ್ಲಿ ದಕ್ಷತೆ, ಉತ್ಪಾದನಾ ವೆಚ್ಚದಲ್ಲಿ ಉಳಿತಾಯ, ಬೆಳೆಯ ತೀವ್ರತೆಯನ್ನು ಹೆಚ್ಚಿಸುವುದು, ವಾಣಿಜ್ಯ ಬೆಳೆಗಳ ಕಡೆಗೆ ವೈವಿಧ್ಯಗೊಳಿಸುವುದು, ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದು ಮತ್ತು ರೈತರ ಬೆಳೆಗಳಿಗೆ ನೈಜ ಬೆಲೆಯನ್ನು ನೀಡುವತ್ತ ಗಮನ ಕೇಂದ್ರೀಕರಿಸುವ ಅಗತ್ಯವಿದೆ. ರೈತರ ಆದಾಯ ದ್ವಿಗುಣಗೊಳಿಸುವುದರಲ್ಲಿ ಬಹುದೊಡ್ಡ ಸವಾಲು ಇರುವುದು ಕೊಯ್ಲು ನಂತರದ ಪ್ರಕ್ರಿಯೆ, ಆದ್ದರಿಂದ ಆಹಾರೋತ್ಪನ್ನಗಳ ಕೊಯ್ಲು ನಂತರದ ಪ್ರಕ್ರಿಯೆಗಳನ್ನು ಮತ್ತಷ್ಟು ಪರಿಣಾಮಕಾರಿಯನ್ನಾಗಿಸುವುದರತ್ತ ಹೆಚ್ಚಿನ ಗಮನಹರಿಸಬೇಕಿದ್ದು, ಕೊಯ್ಲು ನಂತರ–

ಒಟ್ಟುಗೂಡಿಸುವಿಕೆ, ಸಂಸ್ಕರಣೆ, ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಮತ್ತು ರಫ್ತು ವಿಭಾಗಗಳೂ ಕೂಡ ರೈತರ ಆದಾಯವನ್ನು ದ್ವಿಗುಣಗೊಳಿಸುವುದಕ್ಕೆ ಪ್ರಮುಖ ಅಂಶವಾಗುತ್ತವೆ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕೃಷಿಕರು ತೊಡಗಿಸಿಕೊಳ್ಳಬೇಕಾಗುತ್ತದೆ.

ಪ್ರಸಕ್ತ ಕೃಷಿ ಮತ್ತು ತೋಟಗಾರಿಕಾ ಮೇಳ–2023ರಲ್ಲಿ ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ 7 ಜಿಲ್ಲೆಗಳ ಪ್ರಗತಿಪರ ರೈತರು ಕೃಷಿಯಲ್ಲಿ ವಿಶೇಷ ಸಾಧನೆಯನ್ನು ಮಾಡಿರುವಂತಹ ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಮತ್ತು ಕೃಷಿಕ ಮಹಿಳೆಯರ ಸಾಧನೆಗಳನ್ನು ದಾಖಲಿಸಲಾಗುತ್ತಿದೆ. ಈ ಎಲ್ಲಾ ಸಾಧಕರನ್ನು ಗುರುತಿಸುವ ಮೂಲಕ ರೈತರಿಗೆ ಕೃಷಿಯಲ್ಲಿ ಆಸಕ್ತಿ ಹೆಚ್ಚಿಸುವ ಮತ್ತು ಉತ್ತೇಜನ ನೀಡುವಂತಹ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ಪ್ರಗತಿಪರ ರೈತ /ರೈತ ಮಹಿಳೆಯರ ಸಾಧನೆಗಳನ್ನು **"ಪ್ರಗತಿಪರ ಕೃಷಿಕರ ಸಾಧನೆಗಳು"** ಎಂಬ ಶೀರ್ಷಿಕೆಯಡಿಯಲ್ಲಿ ಕಿರು ಹೊತ್ತಿಗೆಯನ್ನು ಪ್ರಕಟಿಸಲಾಗುತ್ತಿದ್ದು, ಇದು ಇತರೆ ರೈತರಿಗೂ ಪ್ರೇರೇಪಣೆಯಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

**(ಆರ್. ಸಿ. ಜಗದೀಶ)**



**ಡಾ. ಬಿ. ಹೇಮ್ಲಾನಾಯಕ್**
ವಿಸ್ತರಣಾ ನಿರ್ದೇಶಕರು
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ
ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

# ಆಶಯ ನುಡಿ

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕೃಷಿ ಮತ್ತು ತೋಟಗಾರಿಕಾ ಮೇಳ–2023 ಅನ್ನು ಶಿವಮೊಗ್ಗದ ನವಿಲೆ ಆವರಣದಲ್ಲಿ ಮಾರ್ಚ್ 17 ರಿಂದ 20 ರವರೆಗೆ "ಸುಸ್ಥಿರ ಆದಾಯಕ್ಕಾಗಿ – ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ" ಎಂಬ ಧ್ಯೇಯದೊಂದಿಗೆ ಕೃಷಿ ಮಹಾವಿದ್ಯಾಲಯ, ನವುಲೆ ಆವರಣದಲ್ಲಿ ಆಚರಿಸಲಾಗುತ್ತಿದೆ.

ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯವು ಹಲವಾರು ವಿಸ್ತರಣಾ ಕಾರ್ಯಕ್ರಮಗಳ ಮೂಲಕ ರೈತರನ್ನು ತಲುಪುತ್ತಿದೆ. ವಿಸ್ತರಣಾ ಕಾರ್ಯಕ್ರಮಗಳು ರೈತರಲ್ಲಿ ಹೆಚ್ಚಿನ ಜಾಗೃತಿಯನ್ನು ಮೂಡಿಸಿ, ಅವರಲ್ಲಿ ಆಶಾದಾಯಕ ಮನೋಭಾವ ಬೆಳೆಸಿ ಆಧುನಿಕ ತಂತ್ರಜ್ಞಾನಗಳನ್ನು ಅನುಸರಿಸಲು ಪ್ರೇರೆಪಿಸುತ್ತಿದೆ.

ಕೃಷಿ ಮತ್ತು ತೋಟಗಾರಿಕಾ ಮೇಳದ ಸಂದರ್ಭದಲ್ಲಿ ನಮ್ಮ ರೈತರು ನೇರವಾಗಿ ಪ್ರಾತ್ಯಕ್ಷಿಕೆಗಳನ್ನು ನೋಡಿ ಅವಲೋಕಿಸುವ, ನಮ್ಮ ವಿಜ್ಞಾನಿಗಳೊಂದಿಗೆ ಸಂವಾದ ನಡೆಸುವ, ಹಲವಾರು ಪ್ರದರ್ಶನ ಮಳಿಗೆಗಳಿಗೆ ಭೇಟಿ ನೀಡುವ, ಹೊಸ ಪರಿಕರಗಳನ್ನು ಮತ್ತು ಪ್ರಕಟಣೆಗಳನ್ನು ಕೊಳ್ಳುವ ಹಾಗೂ ನೂತನ ತಾಂತ್ರಿಕತೆಗಳ ಬಗ್ಗೆ ತಿಳಿದುಕೊಳ್ಳುವ ಇತ್ಯಾದಿ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಅಲ್ಲದೆ ಕೃಷಿ ಮೇಳವು ರೈತರಿಗೆ ಪ್ರತ್ಯಕ್ಷವಾಗಿ ತಾವೇ ನೋಡುವಂತಹ ಮತ್ತು ವಿಜ್ಞಾನಿಗಳೊಂದಿಗೆ ಸಂವಾದ ನಡೆಸುವಂತಹ ಮತ್ತು ಯಂತ್ರೋಪಕರಣಗಳನ್ನು ಸ್ವತಃ ವೀಕ್ಷಿಸುವಂತಹ ಅವಕಾಶವನ್ನು ಒದಗಿಸುತ್ತದೆ. ಇದು ರೈತರ ಗಮನ ಸೆಳೆಯುವಂತಹ, ಅವರಲ್ಲಿ ಆಸಕ್ತಿ ಹುಟ್ಟಿಸುವ ಆಶಾದಾಯಕ ಮನೋಭಾವ ಮತ್ತು ಆತ್ಮವಿಶ್ವಾಸ ಬೆಳೆಸಿ ಅದರಲ್ಲಿ ಕಾರ್ಯಪ್ರವೃತ್ತರಾಗುವಂತೆ ಪ್ರೇರಣೆ ನೀಡುತ್ತದೆ.

ಕೃಷಿಯನ್ನು ಹೊರತುಪಡಿಸಿ ಇತರೆ ಪೂರಕ ಚಟುವಟಿಕೆಗಳ ಮೂಲಕ ರಾಜ್ಯದಲ್ಲಿ ರೈತರ ಆದಾಯ ದುಪ್ಪಟ್ಟುಗೊಳಿಸಲು ಕೃಷಿಗೆ ಪೂರಕವಾಗಿ ಭಾರತ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯವನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿರುವುದು ಹೆಮ್ಮೆಯ

ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ “ರೈತರ ಸುಸ್ಥಿರ ಆದಾಯಕ್ಕೆ–ಸೆಕೆಂಡರಿ ಕೃಷಿ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ” ಘೋಷವಾಕ್ಯದ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ವೈಜ್ಞಾನಿಕ ನೀತಿ ರೂಪಿಸಿದ್ದು, ಇದಕ್ಕೆ ಪೂರಕವಾಗಿ ಕೃಷಿ ಅಭಿವೃದ್ಧಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದ ನೀತಿ ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರಾಂಡ್ ಮೂಲಕ ಮಾರುಕಟ್ಟೆಯನ್ನು ಕಲ್ಪಿಸುವುದು ಸೆಕೆಂಡರಿ ಕೃಷಿಯ ಉದ್ದೇಶವಾಗಿರುತ್ತದೆ.

ರೈತರು ಕೃಷಿಯ ಜೊತೆಗೆ ಪಶುಸಂಗೋಪನೆಯ ಭಾಗವಾಗಿ ಕೋಳಿ ಸಾಕಾಣಿಕೆ, ಕುರಿ–ಮೇಕೆ ಸಾಕಾಣಿಕೆಯಿಂದ ರೈತರ ಆದಾಯ ಹೆಚ್ಚಿಸಿಕೊಳ್ಳಬಹುದಾಗಿದೆ. ಅರಣ್ಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಜಮೀನಿನ ಬದುಗಳಲ್ಲಿ ಬಹು ವಾರ್ಷಿಕ ಬೆಳೆಯಿಂದ ಆದಾಯ ಪಡೆಯುವ ಮೂಲಕ ಪ್ರಾಥಮಿಕ ಕೃಷಿಯೊಂದಿಗೆ ಸೆಕೆಂಡರಿ ಕೃಷಿಯನ್ನು ಅನುಸರಿಸುವುದು ಇಂದು ಅನಿವಾರ್ಯವಾಗಿರುತ್ತದೆ.

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಕೃಷಿ ಮೇಳದ ಸಂದರ್ಭದಲ್ಲಿ ಸಾಧಕ ರೈತ ಮತ್ತು ರೈತ ಮಹಿಳೆಯರನ್ನು ಗುರುತಿಸಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರನ್ನು ಸನ್ಮಾನಿಸಲಾಗಿದೆ. ಪ್ರಗತಿಪರ ಕೃಷಿಕರ ಸಾಧನೆಗಳ ಸಂಕ್ಷಿಪ್ತ ಮಾಹಿತಿಯನ್ನು **“ದಶಕದ ಪ್ರಗತಿಪರ ರೈತರ ಸಾಧನೆಗಳು”** ಎಂಬ ಶೀರ್ಷಿಕೆಯಡಿಯಲ್ಲಿ ಕಿರುಹೊತ್ತಿಗೆಯನ್ನು ಪ್ರಕಟಿಸುತ್ತಿದ್ದು, ಇದು ರೈತ ಸಮುದಾಯಕ್ಕೆ ಪ್ರೇರಣೆ ನೀಡುತ್ತದೆ ಎಂದು ಆಶಿಸುತ್ತೇನೆ.



**(ಬಿ. ಹೇಮ್ಲಾ ನಾಯಕ್)**

## ಪರಿವಿಡಿ


| | | |
|---|---|---|
| | ಮುನ್ನುಡಿ | iii |
| | ಆಶಯ ನುಡಿ | vi |
| 01 | ಕೃಷಿಯಲ್ಲಿ ಒಳ್ಳೆಯ ಆದಾಯವಿದೆ : ಶ್ರೀ ರಾಜೇಂದ್ರ ಹೆಚ್. ಟಿ. | 02 |
| 02 | ಕೃಷಿ ಎಂದರೆ ಅದು ಅಕ್ಷಯ ಪಾತ್ರೆ : ಶ್ರೀಮತಿ ಲೀಲಾವತಿ | 06 |
| 03 | ಸರ್ಕಾರದ ಸೌಲಭ್ಯಗಳು ರೈತರಿಗೆ ನೇರವಾಗಿ ದೊರೆಯಬೇಕು: ಶ್ರೀ ಸತೀಶ್ ಹೆಗ್ಡೆ | 10 |
| 04 | ಕೃಷಿಯಲ್ಲಿ ಸಂತೃಪ್ತ ಭಾವ ಕಂಡುಕೊಂಡ: ಶ್ರೀಮತಿ ಶರಾವತಿ ಯು.ಆರ್. | 14 |
| 05 | ತೋಟಗಾರಿಕೆ ಬೆಳೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ : ಮೋತಿನಾಯ್ಕ್ | 18 |
| 06 | ಆರ್ಥಿಕ ಸ್ವಾವಲಂಬನೆಗೆ ಸಮಗ್ರ ಕೃಷಿ ಪದ್ಧತಿ : ಶ್ರೀಮತಿ ಲಕ್ಷ್ಮೀ | 21 |
| 07 | ಕೃಷಿಯನ್ನು ಉದ್ದಿಮೆಯಾಗಿ ರೂಪಿಸಿದ : ಶ್ರೀ ನಾಗರಾಜ ಶೆಟ್ಟಿ | 23 |
| 08 | ಕೃಷಿಯಲ್ಲಿ ಪ್ಲಾನಿಂಗ್ ಮ್ಯಾನೇಜ್‌ಮೆಂಟ್ ಇರಬೇಕು : ಡಾ. ಆಶಾ ಶಂಕರ್ ಭಂಡಾರಿ | 27 |
| 09 | ಸಮಗ್ರ ಕೃಷಿ ಪದ್ಧತಿಯಿಂದ ಆದಾಯ ದುಪ್ಪಟ್ಟು ಮಾಡಿಕೊಂಡ : ಶ್ರೀ ನಿಂಗಾನಾಯ್ಕ | 31 |
| 10 | ರೇಷ್ಮೆ ಕೃಷಿಯಿಂದ ವರ್ಷಪೂರ್ತಿ ಆದಾಯ ಪಡೆಯಬಹುದು : ಶ್ರೀಮತಿ ಬಸಮ್ಮ | 34 |
| 11 | ಒಂದು ಬೆಳೆ ಕೈಕೊಟ್ಟರೂ ಇನ್ನೊಂದು ಬೆಳೆ ಕೈಹಿಡಿಯುತ್ತೆ : ಶ್ರೀಯುತ ಮೊಹಮದ್ ಹನೀಫ್ | 37 |
| 12 | ಯಾವುದೇ ಬೆಳೆಗೆ ಬೆಲೆ ಸಿಕ್ಕಾಗ ಹೆಚ್ಚೆಚ್ಚು ಮಾಡಬೇಕು : ಶ್ರೀಮತಿ ರೇವತಿ ಸಿ. ಡಿ. | 41 |
| 13 | ಕೃಷಿ ಕಾಯಕದಲ್ಲಿ ಆಸಕ್ತಿ ಇರಬೇಕು : ಶ್ರೀ ಪೂರ್ಣೇಶ್ ಹೆಚ್. ಕೆ. | 44 |
| 14 | ಕೃಷಿಗೆ ಹಾಕಿದ ಹಣ ಯಾವತ್ತು ವ್ಯರ್ಥ ಆಗಲ್ಲ : ಶ್ರೀಮತಿ ಶೈಲಜ ಎಸ್. | 47 |



ಕೃಷಿಯನ್ನು ನಂಬಿದರೆ ಅದು ಯಾವತ್ತೂ ನಮ್ಮ ಕೈಯನ್ನು ಬಿಡುವುದಿಲ್ಲ. ಕೃಷಿಯಲ್ಲಿ ಒಳ್ಳೆಯ ಆದಾಯವಿದೆ. ಇವತ್ತು ಕೃಷಿ ಮಾಡಿ, ಇವತ್ತೇ ಆದಾಯ ಬರಬೇಕೆಂದರೆ ಸಾಧ್ಯವಿಲ್ಲ, ನಾವು ಕಾಯಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಇಂತಹ ರೈತರೇ ಜಾಸ್ತಿ ಕಂಡುಬರುತ್ತಿದ್ದು, ಕೃಷಿಯನ್ನು ಕಮರ್ಷಿಯಲ್ ರೀತಿ ನೋಡಬಾರದು. ಕೃಷಿ ಐಟಿ–ಬಿಟಿಯವರ ಸಂಬಳದ ರೀತಿಯಲ್ಲಿ ಇರೋದಿಲ್ಲ. ಇಲ್ಲಿ ನೆಮ್ಮದಿ ಸಿಗುತ್ತೆ, ನಮಗೆ ಬೇಕಾದ ರೀತಿಯಲ್ಲಿ ನಾವು ಇಲ್ಲಿ ಜೀವನ ಮಾಡಬಹುದು. ಸೀಸನ್ ವೈಸ್ ಕೆಲಸ ಮಾಡಿದರೆ ಕೃಷಿಯಲ್ಲೂ ಪ್ರತಿ ದಿನವೂ ಆದಾಯ ಪಡೆಯಬಹುದು ಎನ್ನುತ್ತಾರೆ ಶ್ರೀ ರಾಜೇಂದ್ರರವರು.

**ಶ್ರೀಯುತ ರಾಜೇಂದ್ರ ಹೆಚ್. ಟಿ.**
ಹಿಂಡೂಮನೆ, ಹೊಸಹಳ್ಳಿ ಗ್ರಾಮ
ಸಾಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ
ಮೊಬೈಲ್ : 87221129090

# ಕೃಷಿಯಲ್ಲಿ ಒಳ್ಳೆಯ ಆದಾಯವಿದೆ

**ಶ್ರೀ ರಾಜೇಂದ್ರ ಹೆಚ್. ಟಿ.**

ಕೃಷಿಯನ್ನು ನಂಬಿದರೆ ಅದು ಯಾವತ್ತೂ ನಮ್ಮ ಕೈಯನ್ನು ಬಿಡುವುದಿಲ್ಲ. ಕೃಷಿಯಲ್ಲಿ ಒಳ್ಳೆಯ ಆದಾಯವಿದೆ. ಇವತ್ತು ಕೃಷಿ ಮಾಡಿ, ಇವತ್ತೇ ಆದಾಯ ಬರಬೇಕೆಂದರೆ ಸಾಧ್ಯವಿಲ್ಲ, ನಾವು ಕಾಯಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಇಂತಹ ರೈತರೇ ಜಾಸ್ತಿ ಕಂಡುಬರುತ್ತಿದ್ದು, ಕೃಷಿಯನ್ನು ಕಮರ್ಷಿಯಲ್ ರೀತಿ ನೋಡಬಾರದು. ಕೃಷಿ ಐಟಿ–ಬಿಟಿಯವರ ಸಂಬಳದ ರೀತಿಯಲ್ಲಿ ಇರೋದಿಲ್ಲ. ಇಲ್ಲಿ ನೆಮ್ಮದಿ ಸಿಗುತ್ತೆ, ನಮಗೆ ಬೇಕಾದ ರೀತಿಯಲ್ಲಿ ನಾವು ಇಲ್ಲಿ ಜೀವನ ಮಾಡಬಹುದು. ಸೀಸನ್ ವೈಸ್ ಕೆಲಸ ಮಾಡಿದರೆ ಕೃಷಿಯಲ್ಲೂ ಪ್ರತಿ ದಿನವೂ ಆದಾಯ ಪಡೆಯಬಹುದು ಎನ್ನುತ್ತಾರೆ ಶ್ರೀ ರಾಜೇಂದ್ರರವರು.

ಶ್ರೀಯುತ ರಾಜೇಂದ್ರ, ಹೆಚ್, ಟಿ, ಹಿಂಡೂಮನೆಯವರು ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು, ಜಿಲ್ಲೆಯಲ್ಲಿ ಸಮಗ್ರ ಕೃಷಿ ಪದ್ಧತಿಗೆ ಹೆಸರುವಾಸಿಯಾಗಿದ್ದಾರೆ. ಇವರದು 9ಮಂದಿ ಅಣ್ಣ ತಮ್ಮಂದಿರ ಅವಿಭಕ್ತ ಕುಟುಂಬ, ಈ ಕುಟುಂಬದ ಸದಸ್ಯರೆಲ್ಲರೂ ಕೃಷಿಯಲ್ಲಿ ತೊಡಗಿಸಿಕೊಂಡಿರುವುದರಿಂದ ಕೂಲಿಕಾರ್ಮಿಕರ ಸಮಸ್ಯೆ ಕಂಡು ಬಂದಿಲ್ಲ. ರಾಜೇಂದ್ರ ಅವರು ಬಿ.ಕಾಂ. ಪದವಿಧರರಾಗಿದ್ದರೂ ಕೃಷಿಯಲ್ಲಿ ಯೋಜನಾಬದ್ಧವಾಗಿ ತೊಡಗಿಸಿಕೊಂಡಿದ್ದಾರೆ.

ಶ್ರೀಯುತರು 1.54 ಎಕರೆ ಖುಷ್ಕಿ ಜಮೀನನ್ನು ಹಾಗೂ 2.37 ಎಕರೆ ತೋಟವನ್ನು ಹೊಂದಿದ್ದು, ತಮ್ಮ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಇವರು ತಮ್ಮ ಜಮೀನಿನಲ್ಲಿ ಅಡಿಕೆ, ತೆಂಗು, 2 ಎಕರೆ








2

ರಬ್ಬರ್, ಬಾಳೆ, 800ಕಾಫಿ ಗಿಡ, 600 ಹಿಪ್ಪಲಿ ಗಿಡದೊಂದಿಗೆ 30 ಬಗೆಯ ತಳಿಗಳಾದ ಕಾಳು ಮೆಣಸು, 300 ಗೇರು ಹೀಗೆ ಸುಮಾರು 30 ವಿವಿಧ ಬೆಳೆಗಳನ್ನು ಮಿಶ್ರ ಬೆಳೆಯಾಗಿ ಬೆಳೆದು ಉತ್ತಮ ಲಾಭಗಳಿಸುತ್ತಿದ್ದಾರೆ. ಅಲ್ಲದೆ ಮ್ಯಾಂಗೋಸ್ಟಿನ್–200, ಬಟರ್ ಫ್ರೂಟ್–100, 15 ವಿವಿಧ ಬಗೆಯ ತಳಿಗಳಾದ ಹಲಸು–600, ಎಗ್ ಫ್ರೂಟ್, ಸುಮಾರು 800 ಜಾತಿಯ ಹಣ್ಣುಗಳು, ಎರಡುವರೆ ಎಕರೆಯಲ್ಲಿ ಸಹಜ ಕಾಡನ್ನು ಬೆಳೆಸಿದ್ದಾರೆ. ಇವರು ಜೇನು 30ಪೆಟ್ಟಿಗೆ ಹಾಗೂ ನಸರಿ ಜೇನು 20ಪೆಟ್ಟಿಗೆಯಲ್ಲಿ ಜೇನು ಸಾಕಣೆ ಮಾಡುತ್ತಿದ್ದಾರೆ. ಪ್ರತಿ ತಿಂಗಳು ಯಾವುದಾದರೂ ಒಂದು ಬೆಳೆಯಿಂದ ಆದಾಯ ಬರುವಂತೆ ಕೃಷಿಯನ್ನು ಮಾಡುತ್ತಿದ್ದಾರೆ.





ಅಲ್ಲದೇ, ಇವರು ಮೌಲ್ಯವರ್ಧನೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು, ತಾವು ಬೆಳೆದ ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ಸ್ಥಳೀಯವಾಗಿ ಮತ್ತು ಸಾಮಾಜಿಕ ಜಾಲತಾಣ ಬಳಸಿ ಮಾರಾಟ ಮಾಡಿ ಲಾಭಗಳಿಸುತ್ತಿದ್ದಾರೆ. ಶ್ರೀಯುತರು ಹಲವು ಔಷಧಿ ಗಿಡಗಳನ್ನು, ಸಾವಿರಕ್ಕಿಂತಲೂ ಅಧಿಕ ವಿವಿಧ ಜಾತಿಯ ಸಸ್ಯಗಳನ್ನು, ಹಲವು ಕಾಡು ಹಣ್ಣಿನ ಗಿಡಗಳನ್ನು ದೇಶ–ವಿದೇಶಗಳಿಂದ ಸಂಗ್ರಹಿಸಿ ಬೆಳೆಸಿದ್ದಾರೆ. ಅಲ್ಲದೆ ವಿವಿಧ ಹಣ್ಣಿನ ಗಿಡಗಳನ್ನು ಕಸಿಕಟ್ಟಿ ಇತರೆ ಆಸಕ್ತ ರೈತರಿಗೆ ಮಾರಾಟ ಮಾಡುತ್ತಿದ್ದಾರೆ.

ಇದರ ಜೊತೆಗೆ ಅಡಿಕೆ ಸಿಪ್ಪೆಯಲ್ಲಿ ಕಾಂಪೋಸ್ಟ್ ತಯಾರಿಕೆ, ನೀರಿನ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಗೆ ಒತ್ತು ನೀಡಿದ್ದಾರೆ. ಇದರ ಜೊತೆಗೆ ನರ್ಸರಿ, ಜೇನು ಸಾಕಾಣಿಕೆ, ಸಮಗ್ರ ಪೋಷಕಾಂಶ ಮತ್ತು ಪೀಡೆ ನಿರ್ವಹಣೆ, ಜೈವಿಕ ಗೊಬ್ಬರಗಳ ಬಳಕೆ, ಸ್ಥಳೀಯ ತಾಂತ್ರಿಕ ಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ತೆಂಗಿನ ಕಾಯಿ ಸುಲಿಯುವ ಸಾಧನವನ್ನು ಅಭಿವೃದ್ಧಿಪಡಿಸಿದ್ದು ಹಲವು ರೈತರು ಇದನ್ನು ಉಪಯೋಗಿಸುತ್ತಿದ್ದಾರೆ. ಇವರ ಜಮೀನಿನಲ್ಲಿ 25 ವಿವಿಧ ಬಿದಿರು ಜಾತಿಯನ್ನು ಬೆಳೆಸಿದ್ದಾರೆ. ಇವರು 8 ರುದ್ರಾಕ್ಷಿಮರಗಳನ್ನು ಬೆಳಸಿ, ಮೆಡಿಸನ್‌ಗಾಗಿ ಕೇರಳದಿಂದ ಬಂದು ತೆಗೆದುಕೊಂಡು ಹೋಗುತ್ತಿದ್ದಾರೆ.

ಇದರ ಜೊತೆಗೆ ಆಸಕ್ತ ರೈತರಿಗೆ, ಸಂಶೋಧನ ವಿದ್ಯಾರ್ಥಿಗಳಿಗೆ ತಮಗೆ ತಿಳಿದ ಹಲಸು, ಕೋಕಂ, ಜಾಯಿಕಾಯಿ, ಗೇರುಹಣ್ಣು ಹಾಗೂ ಫ್ಯಾಶನ್ ಫ್ರೂಟ್‌ಗಳ ಜಾಮ್ ಮತ್ತು ಸ್ಕ್ವಾಶ್‌ಗಳ ತಯಾರಿಯ ಕೃಷಿಯ ಮೌಲ್ಯ ವರ್ಧಿತ ಉತ್ಪನ್ನಗಳ ಬಗ್ಗೆ ತರಬೇತಿ ಕೊಡುತ್ತಿದ್ದಾರೆ. ಅಲ್ಲದೆ ವಿವಿಧ ಜಾತಿಯ ಗಿಡಗಳ ಬಗ್ಗೆ ಹಿಂಡೂಮನೆ ಎಕ್ಸೋಟಿಕ್ ಫಾರ್ಮ್ ಎಂಬ ಯುಟ್ಯೂಬ್ ಚಾನೆಲ್ ಪ್ರಾರಂಭಿಸಿ, ಮಾಹಿತಿ ತಂತ್ರಜ್ಞಾನ ವರ್ಗಾವಣೆಯನ್ನು ಮಾಡುತ್ತಿದ್ದಾರೆ. ಇವರ ಜಮೀನಿಗೆ ಆತ್ಮ ಯೋಜನೆ ಮುಖಾಂತರ ಕೃಷಿ ಪ್ರವಾಸಕ್ಕೆ ಬರುವಂತಹ ರೈತರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.



ಇವರ ಸಾಧನೆಗೆ ಹವ್ಯಕ ರತ್ನ ಪ್ರಶಸ್ತಿ, ಕನ್ನಡಪ್ರಭ, ಏಷ್ಯಾನೆಟ್ ಸುವರ್ಣ ನ್ಯೂಸ್ ರಾಜ್ಯ ಪ್ರಶಸ್ತಿ, ವಿಜಯ ಕರ್ನಾಟಕ ಜಿಲ್ಲಾ ಮತ್ತು ರಾಜ್ಯ ಪ್ರಶಸ್ತಿ, ಆತ್ಮ ಯೋಜನೆಯ ಜಿಲ್ಲಾ ಮತ್ತು ರಾಜ್ಯ ಪ್ರಶಸ್ತಿ, ಜಿಲ್ಲಾಮಟ್ಟದ ಫಲ ಪುಷ್ಪ ಪ್ರದರ್ಶನ ಪ್ರಶಸ್ತಿ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ ಮಾಡಲಾಗಿದೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀ ರಾಜೇಂದ್ರ ಹೆಚ್. ಟಿ.** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **"ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023"** ಅನ್ನು ನೀಡಿ ಗೌರವಿಸುತ್ತಿದೆ.



ಕೃಷಿ ಅಂದರೆ ಅದು ಅಕ್ಷಯ ಪಾತ್ರೆ, ನಾವು ಏನು ಬಿತ್ತುತ್ತೇವೆಯೋ ಅದರ ಹತ್ತು ಪಟ್ಟು ಪಡೆದುಕೊಳ್ಳುತ್ತೇವೆ. ನಾವು ಕೃಷಿಯನ್ನು ಮಕ್ಕಳು ಬೆಳೆಸುವ ರೀತಿಯಲ್ಲಿ ಬೆಳೆಸಬೇಕು. ನಾವು ಬೆಳೆಗಳನ್ನು ಎಷ್ಟು ಶ್ರದ್ಧೆ, ಆಸಕ್ತಿಯಿಂದ ಸಾಕುತ್ತೇವೆಯೋ, ಅವು ನಮ್ಮನ್ನು ಕೈಹಿಡಿಯುತ್ತವೆ. ನಾವು ಎಷ್ಟು ಶ್ರಮ ಹಾಕುತ್ತೇವೆಯೋ ಅಷ್ಟೇ ಲಾಭವನ್ನು ನಮ್ಮ ಕೃಷಿ ಕೊಡುತ್ತದೆ. ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡುವುದರ ಮೂಲಕ ನಾನು ಉದ್ದಿಮೆದಾರಳಾಗಬೇಕೆಂಬ ಕನಸಿದೆ, ಆ ಕನಸಿಗೆ ಈ ಮೌಲ್ಯವರ್ಧಿತ ಉತ್ಪನ್ನಗಳು ನನ್ನ ರೆಕ್ಕೆಪುಕ್ಕಗಳಾಗಿವೆ, ಹಾರುವುದೊಂದೆ ಬಾಕಿ ಎನ್ನುತ್ತಾರೆ ಶ್ರೀಮತಿ ಲೀಲಾವತಿಯವರು.

**ಶ್ರೀಮತಿ ಲೀಲಾವತಿ ಎನ್. ಆರ್.**
ಹಳೇಸೀಗೆಬಾಗಿ ಗ್ರಾಮ
ಭದ್ರಾವತಿ ತಾಲ್ಲೂಕು
ಶಿವಮೊಗ್ಗ ಜಿಲ್ಲೆ
ಮೊಬೈಲ್ : 7204298112
7353527346

# ಕೃಷಿ ಎಂದರೆ ಅದು ಅಕ್ಷಯ ಪಾತ್ರೆ

## ಶ್ರೀಮತಿ ಲೀಲಾವತಿ

ಕೃಷಿ ಅಂದರೆ ಅದು ಅಕ್ಷಯ ಪಾತ್ರೆ, ನಾವು ಏನು ಬಿತ್ತುತ್ತೇವೆಯೋ ಅದರ ಹತ್ತು ಪಟ್ಟು ಪಡೆದುಕೊಳ್ಳುತ್ತೇವೆ. ನಾವು ಕೃಷಿಯನ್ನು ಮಕ್ಕಳು ಬೆಳೆಸುವ ರೀತಿಯಲ್ಲಿ ಬೆಳೆಸಬೇಕು. ನಾವು ಬೆಳೆಗಳನ್ನು ಎಷ್ಟು ಶ್ರದ್ಧೆ, ಆಸಕ್ತಿಯಿಂದ ಸಾಕುತ್ತೇವೆಯೋ, ಅವು ನಮ್ಮನ್ನು ಕೈಹಿಡಿಯುತ್ತವೆ. ನಾವು ಎಷ್ಟು ಶ್ರಮ ಹಾಕುತ್ತೇವೆಯೋ ಅಷ್ಟೇ ಲಾಭವನ್ನು ನಮ್ಮ ಕೃಷಿ ಕೊಡುತ್ತದೆ. ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡುವುದರ ಮೂಲಕ ನಾನು ಉದ್ದಿಮೆದಾರಳಾಗಬೇಕೆಂಬ ಕನಸಿದೆ, ಆ ಕನಸಿಗೆ ಈ ಮೌಲ್ಯವರ್ಧಿತ ಉತ್ಪನ್ನಗಳು ನನ್ನ ರೆಕ್ಕೆಪುಕ್ಕಗಳಾಗಿವೆ, ಹಾರುವುದೊಂದೆ ಬಾಕಿ ಎನ್ನುತ್ತಾರೆ ಶ್ರೀಮತಿ ಲೀಲಾವತಿಯವರು.

ಶ್ರೀಮತಿ ಲೀಲಾವತಿ, ಎನ್. ಆರ್. ಇವರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಹಳೇಸೀಗೆಬಾಗಿ ಗ್ರಾಮದಲ್ಲಿ ವಾಸವಾಗಿದ್ದು, ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಲ್ಲಿನ ವಮೌಲ್ಯವರ್ಧನೆಗೆ ಹೆಸರುವಮಾಡಿದ್ದಾರೆ. ಲೀಲಾವತಿಯವರು ಓದಿದ್ದು, ಪಿಯುಸಿ ಆದರೂ ಕೃಷಿಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಮದುವೆಗೆ ಮುಂಚೆ ವಿಶಾರ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಬ್ಯುಟಿಶನ್ ಕೋರ್ಸ್ ಮತ್ತು ಬೆಂಗಳೂರಿನ ನಿಫ್ಟ್ ಕಾಲೇಜಿನಲ್ಲಿ ಒಂದು ತಿಂಗಳ ಪ್ಯಾಷನ್ ಡಿಸೈನಿಂಗ್ ತರಬೇತಿ ಪಡೆದಿದ್ದಾರೆ. ಮದುವೆಯಾಗಿ ತನ್ನ ಗಂಡನ ಮನೆಗೆ ಬಂದಾಗ ಕೃಷಿಯನ್ನು ಒಂದು ಸವಾಲಾಗಿ ತೆಗೆದುಕೊಂಡರು. ನಾವು ಮೊದಲಿಗೆ ಕೃಷಿಯನ್ನು ಮಾಡಿದಾಗ ತುಂಬಾ ಲಾಸ್ ಆಗುತ್ತಿತ್ತು ಎನ್ನುತ್ತಾರೆ. ಆ ದಿನಗಳು ತುಂಬಾ ಕಷ್ಟಕರವಾದ ದಿನಗಳಾಗಿದ್ದವು. ನನ್ನ ಪತಿ ಸುರೇಶ್ ಕುಮಾರ್‌ರವರು ನೀರು ಬಳಕೆದಾರರ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಜಮೀನು ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲ ಎಂದು, ಇದ್ದ ಕೆಲಸವನ್ನು ಬಿಟ್ಟು ನನ್ನೊಂದಿಗೆ ಕೃಷಿಯಲ್ಲಿ ಕೈಜೋಡಿಸಿದರು. ಆಗ ಇವರು



ಕ್ರಾಫ್‌ವರ್ಕರ್ ಸಂಸ್ಥೆಯಲ್ಲಿ ಎಂಬ್ರಾಯಿಡರಿ ತರಬೇತಿ, ವಿಐಎಸ್‌ಎಲ್ ಕಾಲೇಜಿನಲ್ಲಿ ಬ್ಯಾಗ್ ಮೇಕಿಂಗ್ ತರಬೇತಿಯನ್ನು ಪಡೆದುಕೊಂಡೆ ಎನ್ನುತ್ತಾರೆ ಶ್ರೀಮತಿ ಲೀಲಾವತಿಯವರು.



ಇವರು ಒಟ್ಟು 12 ಎಕರೆ ಜಮೀನಿನಲ್ಲಿ ಹಲವು ಬಗೆಯ ಬೆಳೆಗಳನ್ನು ತೆಗೆಯುತ್ತಿದ್ದಾರೆ. ಇವರು 1.02 ಎಕರೆ ಖುಷ್ಕಿ ಜಮೀನಿನಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದು, 2 ಎಕರೆ ನೀರಾವರಿ ಜಮೀನಿನಲ್ಲಿ ಭತ್ತ, 2 ಎಕರೆಯಲ್ಲಿ ಮಡಕೆ ಕಾಳು ಮತ್ತು 6 ಎಕರೆಯಲ್ಲಿ ಅಡಿಕೆ ತೋಟವನ್ನು ಮಾಡುತ್ತಿದ್ದಾರೆ. ಇವರು ಜಮೀನಿನಲ್ಲಿ ಅಡಿಕೆ, ತೆಂಗು, ಭತ್ತ, ಮಡಕೆಕಾಳುಗಳನ್ನು ಮುಖ್ಯ ಬೆಳೆಗಳಾಗಿ ಬೆಳೆಯುತ್ತಿದ್ದಾರೆ. ಬೇಸಾಯದ ಜೊತೆಗೆ ಇವರು ಕೃಷಿ ಹೊಂಡ, ಬಸಿಗಾಲುವೆಗಳು, ಮಳೆ ನೀರಿನ ಕೊಯ್ಲಿಗೂ ಹೆಚ್ಚಿನ ಒತ್ತು ಕೊಟ್ಟಿದ್ದಾರೆ.

ತಮ್ಮ ಜಮೀನಿನಲ್ಲಿ ಕೊಟ್ಟಿಗೆ ಗೊಬ್ಬರವನ್ನು, ಬೇವಿನ ಎಣ್ಣೆ, ಹುಳಿ ಮಜ್ಜಿಗೆ, ಶುಂಠಿ ಕಷಾಯ, ಲಕ್ಕೆ ಸೊಪ್ಪಿನ ಕಷಾಯವನ್ನು ಬಳಸಿ ಕೀಟ ಮತ್ತು ರೋಗ ನಿರ್ವಹಣೆಯನ್ನು ಸಂಪೂರ್ಣವಾಗಿ ಸಾವಯವ ರೀತಿಯಲ್ಲಿ ಅನುಸರಿಸುತ್ತಿದ್ದಾರೆ. ಹಸುಗಳನ್ನು ಸಾಕಿಕೊಂಡಿದ್ದು, ಕೊಟ್ಟಿಗೆ ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳನ್ನು ತಮ್ಮ ಜಮೀನಿನಲ್ಲಿ ಬಳಕೆ ಮಾಡಿಕೊಂಡು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ.

ಶಿವಮೊಗ್ಗ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಜ್ಯೋತಿ ರಾಠೋಡ್, ಡಾ. ಬಿ.ಸಿ. ಹನುಮಂತಸ್ವಾಮಿ ಅವರ ನೆರವಿನಿಂದ ಆರ್ಯ ಯೋಜನೆ ಯಡಿಯಲ್ಲಿ ತರಬೇತಿ ಪಡೆದುಕೊಂಡು ರಾಗಿ ಖಾರ, ರಾಗಿ ಚಕ್ಕಲಿ, ಅಗಸೆ ಉಂಡೆ ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿರುತ್ತಾರೆ. ಅಗಸೆ ಉಂಡೆಯ ಮೆಸರ್‌ಮೆಂಟ್, ಫುಡ್‌ಕ್ವಾಲಿಟಿ, ಉಪಕರಣಗಳು ಮುಂತಾದ ಪರೀಕ್ಷಾ ಚಟುವಟಿಕೆಗಳ ಬಗ್ಗೆ ಹಾಗೂ ಲೈಸೆನ್ಸ್ ಪಡೆಯುವ ಬಗ್ಗೆ ನಾನು ಇಲ್ಲಿ ತಿಳಿದುಕೊಂಡೆ ಎಂದು ತಿಳಿಸುತ್ತಾರೆ ಶ್ರೀಮತಿ ಲೀಲಾವತಿಯವರು.



ಇವರು ಮೌಲ್ಯವರ್ಧನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ರಾಗಿ ಉಂಡೆ, ಖಾರ, ಮಾಲ್ಟ್ ಚಾಕಲೇಟ್, ಅಗಸೆ ಉಂಡೆ, ನುಗ್ಗೆ ಚಟ್ನಿ,

ಶುಂಠಿ ಚಾಕ್ಲೆಟ್, ಶುಂಠಿ ಕ್ಯಾಂಡಿ ಹೀಗೆ ಹಲವಾರು ಬಗೆಯ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಶಿವಮೊಗ್ಗದ ಕೃಷಿ ವಿಜ್ಞಾನ ಕೇಂದ್ರ, ವಿದ್ಯಾರ್ಥಿ ನಿಲಯ, ಬೇಕರಿ ಹಾಗೂ ಸಂಘ–ಸಂಸ್ಥೆಗಳಿಗೆ ನೇರವಾಗಿ ಮಾರಾಟ ಮಾಡಿ ಅಧಿಕ ಲಾಭಗಳಿಸುತ್ತಿದ್ದಾರೆ. ಇವರು ಬೆಳೆಗಳಲ್ಲಿ ಮೌಲ್ಯವರ್ಧನೆ ಬಗ್ಗೆ ಹಲವಾರು ರೈತ ಮಹಿಳೆಯರಿಗೆ ತರಬೇತಿ ನೀಡುತ್ತಿದ್ದಾರೆ. ಇದರ ಜೊತೆಗೆ ಮೂರು ಬಗೆಯ ಸೋಪನ್ನು ನೈಸರ್ಗಿಕ ಪದಾರ್ಥಗಳನ್ನು ಬಳಸಿ ತಯಾರಿಸಿದ್ದಾರೆ. ಈ ಸೋಪಿನ ತರಯಾರಿಕೆ ಬಗ್ಗೆಯು ರೈತ ಮಹಿಳೆಯರಿಗೆ ಮಾಹಿತಿ ನೀಡುತ್ತಿದ್ದಾರೆ.



ಶ್ರೀಮತಿಯವರು ನಿರಂತರವಾಗಿ ಕೃಷಿ ವಿಜ್ಞಾನ ಕೇಂದ್ರ ಶಿವಮೊಗ್ಗ ಮತ್ತು ಕೃಷಿ ಇಲಾಖೆಯೊಂದಿಗೆ ಸಂಪರ್ಕದಲ್ಲಿದ್ದು, ಹಲವಾರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಇವರು ಶ್ರೀ ಶಕ್ತಿ ಸಂಘ, ಗೋಂದಿ ಮಹಿಳಾ ಉಪ ಸಮಿತಿ ಸಂಘ, ಖಾದಿಗ್ರಾಮ ಸೇವಾ ಸಂಘ ಹೀಗೆ ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದಿದ್ದಾರೆ. ಇದರ ಜೊತೆಗೆ ಕೃಷಿ ರಂಗ ಮತ್ತು ನೇಗಿಲ ಮಿಡಿತದ ಸದಸ್ಯತ್ವವನ್ನು ಪಡೆದಿದ್ದಾರೆ. ನೀರಾವರಿ ಇಲಾಖೆಯ ಜಲಧಾರೆ, ಧರ್ಮಸ್ಥಳ ಗ್ರಾಮಾಭಿವೃದ್ಧಿಯ ನಿರಂತರ ಪತ್ರಿಕೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಅಂಗವಾಗಿ ಪದವಿಪೂರ್ವ ಕಾಲೇಜಿನಿಂದ ರೇಡಿಯೋ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಶ್ರೀಮತಿಯವರು ಮೌಲ್ಯವರ್ಧನೆಯು ಸಹ ಆರ್ಥಿಕವಾಗಿ ಸಬಲರಾಗಲು ಸಹಾಯ ಮಾಡಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀಮತಿ ಲೀಲಾವತಿ ಎನ್. ಆರ್**. ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.



ಕೃಷಿಯಲ್ಲಿ ಉತ್ತಮ ಮಾರುಕಟ್ಟೆಯ ಜ್ಞಾನವನ್ನು ತಿಳಿದುಕೊಂಡು, ಬೆಳೆಗಳನ್ನು ಬೆಳೆಯಬೇಕು. ನಮ್ಮ ರೈತರಿಗೆ ಬೆಂಬಲ ಬೆಲೆ ಸಿಗಬೇಕು. ರೈತರಿಗೆ ಸರ್ಕಾರದ ಸೌಲಭ್ಯಗಳು ಮಧ್ಯವರ್ತಿಗಳ ಕೈಗೆ ಹೋಗದೆ, ನೇರವಾಗಿ ರೈತರಿಗೆ ಸಿಗುವಂತಾಗಬೇಕು. ಕೃಷಿಯಲ್ಲಿ ವೈಜ್ಞಾನಿಕವಾಗಿ ಹಾಗೂ ಯಾಂತ್ರೀಕರಣಗಳನ್ನು ಅಳವಡಿಸಿಕೊಂಡರೆ ಖಂಡಿತವಾಗಿ ಲಾಭವಿದೆ.

**ಶ್ರೀ ಸತೀಶ್ ಹೆಗ್ಡೆ**
ಬಿನ್ ಶಿವರಾಮ ಹೆಗ್ಡೆ
ನಿಸರ್ಗ ಹುಲಿಪಾಂಜರಜೆಡ್ಡು
ರಟ್ಟಾಡಿ, ಕುಂದಾಪುರ
ಉಡುಪಿ ಜಿಲ್ಲೆ–576 227
ಮೊಬೈಲ್ : 9008925721

# ಸರ್ಕಾರದ ಸೌಲಭ್ಯಗಳು ರೈತರಿಗೆ ನೇರವಾಗಿ ದೊರೆಯಬೇಕು

**ಶ್ರೀ ಸತೀಶ್ ಹೆಗ್ಡೆ**

ಕೃಷಿಯಲ್ಲಿ ಉತ್ತಮ ಮಾರುಕಟ್ಟೆಯ ಜ್ಞಾನವನ್ನು ತಿಳಿದುಕೊಂಡು, ಬೆಳೆಗಳನ್ನು ಬೆಳೆಯಬೇಕು. ನಮ್ಮ ರೈತರಿಗೆ ಬೆಂಬಲ ಬೆಲೆ ಸಿಗಬೇಕು. ರೈತರಿಗೆ ಸರ್ಕಾರದ ಸೌಲಭ್ಯಗಳು ಮಧ್ಯವರ್ತಿಗಳ ಕೈಗೆ ಹೋಗದೆ, ನೇರವಾಗಿ ರೈತರಿಗೆ ಸಿಗುವಂತಾಗಬೇಕು. ಕೃಷಿಯಲ್ಲಿ ವೈಜ್ಞಾನಿಕವಾಗಿ ಹಾಗೂ ಯಾಂತ್ರೀಕರಣಗಳನ್ನು ಅಳವಡಿಸಿಕೊಂಡರೆ ಖಂಡಿತವಾಗಿ ಲಾಭವಿದೆ.

ಶ್ರೀಯುತ ಸತೀಶ್ ಹೆಗ್ಡೆಯವರು ಉಡುಪಿ ಜಿಲ್ಲೆಯ, ಕುಂದಾಪುರ ತಾಲೂಕಿನ ರಟ್ಟಾಡಿ ಗ್ರಾಮದವರು. ಇವರು ಎಲೆಕ್ಟ್ರಿಕಲ್ ಡಿಪ್ಲೋಮಾ ಪದವೀಧರರಾಗಿದ್ದು, ಬಿ. ಎಸ್. ಎನ್. ಎಲ್. ನಲ್ಲಿ ಉದ್ಯೋಗ ದೊರೆತರೂ ಇದನ್ನು ಕೈಬಿಟ್ಟು, ತನ್ನ ಪ್ರವೃತ್ತಿಯಾಗಿದ್ದ ಫೋಟೊಗ್ರಫಿ ಹಾಗೂ ವೀಡಿಯೋಗ್ರಫಿಯನ್ನು ವೃತ್ತಿಯನ್ನಾಗಿ ಆರಿಸಿಕೊಳ್ಳುತ್ತಾರೆ. ತಂದೆಯವರಿಂದ ಬಂದಿದ್ದ ಒಟ್ಟು 8 ಎಕರೆ ಜಮೀನಿನಲ್ಲಿ, ಏನಾದರೂ ಸಾಧನೆ ಮಾಡಲೇ ಬೇಕೆಂಬ ಬಹು ಆಸಕ್ತಿ ಹಾಗೂ ತುಡಿತದಿಂದಾಗಿ ಕೃಷಿಯಲ್ಲಿ ಮಹತ್ತರ ಸಾಧನೆಯನ್ನು  ಕೈ ಹಾಕುತ್ತಾರೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ತಮ್ಮ 4.5 ಎಕರೆ ಭೂಮಿಯಲ್ಲಿ ಸಮಗ್ರ ಕೃಷಿಪದ್ಧತಿಯನ್ನು ಅಳವಡಿಸಿಕೊಂಡು ತನ್ನ ಜಮೀನನ್ನು ಹಚ್ಚ ಹಸಿರಾಗಿ ಕಂಗೊಳಿಸುವಂತೆ ಮಾರ್ಪಾಡು ಮಾಡಿ, ಮಾದರಿ ರೈತರಾಗಿದ್ದಾರೆ.

ಒಂದೇ ಬೆಳೆ ಮಾಡಿ ಸೂಕ್ತ ಆದಾಯವಿಲ್ಲದೆ ನಷ್ಟ ಅನುಭವಿಸುವಂತಾಗ ಬಾರದೆಂದು ಹತ್ತಾರು ಕೃಷಿ ಎಂಬ ಪ್ರಯೋಗಾತ್ಮಕ ಚಿಂತನೆಯಲ್ಲಿ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಜಮೀನಿನಲ್ಲಿ ಸಮಗ್ರ ಕೃಷಿಪದ್ಧತಿಯನ್ನು ಅನುಸರಿಸುವ ಮೂಲಕ ಕೃಷಿಯನ್ನು ಲಾಭದಾಯಕವಾಗಿಸಿ ಕೊಂಡಿದ್ದಾರೆ.



ಇವರು ತಮ್ಮ ಜಮೀನಿನಲ್ಲಿ ಭತ್ತ, ತೆಂಗು, ಅಡಿಕೆ, ಬಾಳೆ, ಕಾಳುಮೆಣಸು, ಪಪ್ಪಾಯ, ಗೇರು, ತರಕಾರಿ, ಉದ್ದು, ಇತ್ಯಾದಿ ಬೆಳೆಗಳನ್ನು ಬೆಳೆಸುತ್ತಿದ್ದು, ಇದರೊಂದಿಗೆ, ಹೈನುಗಾರಿಕೆ, ಕೋಳಿಸಾಕಣೆ, ಜೇನು ಕೃಷಿ, ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆ ಮತ್ತು ಮೀನುಮರಿ ಉತ್ಪಾದನೆ ಮಾಡುತ್ತಾ ಬಂದಿದ್ದಾರೆ. ಶ್ರೀ ಪದ್ಧತಿಯಲ್ಲಿ ಚಾಪೆನೇಜಿಯನ್ನು





ಬಳಸಿ ಭತ್ತದ ಕೃಷಿ ಮಾಡಿ, 1.5 ಎಕರೆ ಜಮೀನಿನಲ್ಲಿ 22 ಕ್ವಿಂಟಾಲ್ ದಾಖಲೆಯ ಫಸಲನ್ನು ಪಡೆದಿದ್ದಾರೆ. ಸುಮಾರು ನಾಲ್ಕು ಸಾವಿರದಷ್ಟು ಮೋಹಿತ್ ನಗರ ಹಾಗೂ ಮಂಗಳ ಅಡಿಕೆ ಬೆಳೆಸಿದ್ದು, ಪ್ರಸಕ್ತ ಸಾಲಿನಲ್ಲಿ 300 ಮಂಗಳ ಗಿಡಗಳನ್ನು ನಾಟಿ ಮಾಡಿದ್ದಾರೆ. ಅಡಿಕೆಯಲ್ಲಿ ಕಾಳುಮೆಣಸನ್ನು ಮಿಶ್ರ ಬೆಳೆಯಾಗಿ ಹಾಗೂ ಕೊಕ್ಕೋವನ್ನು ಅಂತರ್‌ಬೆಳೆಯಾಗಿ ಬೆಳೆದಿದ್ದಾರೆ. ಇವರು 700 ಥೈವಾನ್ ರೆಡ್‌ಲೇಡಿ ಪಪ್ಪಾಯನ್ನು ಬೆಳೆಸಿದ್ದು, ಹತ್ತು ದಿನಕೊಮ್ಮೆ 2 ಕ್ವಿಂಟಾಲ್‌ಗಿಂತಲೂ ಅಧಿಕ ಇಳುವರಿ ಪಡೆದು ಮಾರುಕಟ್ಟೆಗೆ ಪೂರೈಸುತ್ತಿದ್ದಾರೆ.

ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸಿಕೊಂಡು, ಖರ್ಚು ಕಡಿಮೆಯಾಗುವಂತೆ ಮಾಡಿದ್ದಾರೆ. ಇವರು ಎರೆಗೊಬ್ಬರ, ಕೋಳಿ ಗೊಬ್ಬರ, ಜೈವಿಕ ಗೊಬ್ಬರ, ಸ್ಲರಿ, ಬೀಜಾಮೃತ, ಘನಜೀವಾಮೃತ ಮತ್ತು ಕಿರು ಪೋಷಕಾಂಶಗಳ ಬಳಕೆ, ಸ್ಲರಿ ಹಾಗೂ ಕಾಂಪೋಸ್ಟ್ ತಯಾರಿಕೆಯನ್ನು ತಮ್ಮ ಜಾಗದಲ್ಲೇ ತಯಾರು ಮಾಡಿ ತಮ್ಮ ಜಮೀನಿನಲ್ಲಿ ಬಳಸುತ್ತಿದ್ದಾರೆ. ಮಣ್ಣಿನ ಆರೋಗ್ಯ ಕಾಪಾಡಿಕೊಂಡು ತಮ್ಮ ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಂಡು ತಮ್ಮ ಬೆಳೆಗಳಲ್ಲಿ ಇಳುವರಿಯನ್ನು ಸಹ ಹೆಚ್ಚಿಸಿಕೊಂಡಿದ್ದಾರೆ. ಸಮಗ್ರ ನೀರು ನಿರ್ವಹಣೆ ಅಡಿಯಲ್ಲಿ ತುಂತುರು ನೀರಾವರಿ, ಸೂಕ್ಷ್ಮ ತುಂತುರು ನೀರಾವರಿ ಅಳವಡಿಸಿ ನೀರಿನ ಸದುಪಯೋಗ ಪಡಿಸಿಕೊಂಡಿದ್ದಾರೆ. ಕೀಟ ಮತ್ತು ರೋಗದ ನಿರ್ವಹಣೆಗಾಗಿ ಮೋಹಕ ಬಲೆ, ಸೋಲಾರ್ ಟ್ರಾಪ್, ಬೇವಿನ ಎಣ್ಣೆ, ಬೋರ್ಡೋ ದ್ರಾವಣವನ್ನು ಇತ್ಯಾದಿ ಬಳಸಿ ಕೀಟದ ಬಾಧೆಯನ್ನು ಹತೋಟಿಗೆ ತಂದುಕೊಂಡಿದ್ದಾರೆ.

ಸಮಗ್ರ ಕೃಷಿ ಪದ್ಧತಿಯನ್ನು ಎಲ್ಲಾ ರೈತರು ಮಾಡಬೇಕು, ಇದರೊಂದಿಗೆ

ಅಂತರ್ ಬೆಳೆಗಳನ್ನು ಯಾವ ರೈತನಿಗೂ ಲಾಸ್ ಆಗುವುದಿಲ್ಲ. ಆಯಾ ಸೀಸನ್ ತಕ್ಕ ಬೆಳೆಗಳನ್ನು ಬೆಳೆಯುವುದರಿಂದ ರೈತ ತಾನು ಬೆಳೆದ ಬೆಳೆಗೆ ಸೂಕ್ತವಾದ ಬೆಲೆ ಪಡೆದು ಆರ್ಥಿಕ ಸುಸ್ಥಿರತೆಯನ್ನು ಪಡೆಯಬಹುದಾಗಿದೆ. ಅಲ್ಲದೆ ಇವರು ಹಲವಾರು ಸಂಘ ಸಂಸ್ಥೆಗಳ ಹಾಗೂ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಸದಸ್ಯತ್ವವನ್ನು ಹೊಂದಿದ್ದು ಇತರೆ ರೈತರಿಗೆ ಮಾರ್ಗದರ್ಶನ ಮಾಡುತ್ತಾ ಆದರ್ಶ ರೈತರಾಗಿದ್ದಾರೆ.



ಇವರ ಅತ್ಯುತ್ತಮ ಕೃಷಿ ಸಾಧನೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಪ್ರಶಸ್ತಿ (2015), ಪ್ರತಿಷ್ಠಿತ ಸಬ್ಲಾಡಿ ಶೀನಪ್ಪ ಶೆಟ್ಟಿ ಕೃಷಿ ಪ್ರಶಸ್ತಿ (2017), ಕೃಷಿ ಇಲಾಖೆಯಿಂದ ತಾಲೂಕು ಮಟ್ಟದ ಸಾಧಕ ಕೃಷಿಕ ಪ್ರಶಸ್ತಿ (2017) ರಾಜ್ಯಮಟ್ಟದ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿ (2021–22) ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀ ಸತೀಶ್ ಹೆಗ್ಡೆ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.





ವೃತ್ತಿಯಲ್ಲಿ ಶಿಕ್ಷಕಿಯಾಗಿ, ಪ್ರವೃತ್ತಿಯಲ್ಲಿ ಕೃಷಿಕಳಾಗಿದ್ದ, ಶ್ರೀಮತಿ ಶರಾವತಿಯವರ ಕೃಷಿ ಬದುಕು ಕುತೊಹಲವನ್ನು ಮೂಡಿಸುತ್ತದೆ. ತನ್ನ ಬಾಲ್ಯವನ್ನು ಅಜ್ಜಿಯ ಮನೆಯ ಕೃಷಿಯ ವಾತಾವರಣದಲ್ಲಿ ಕಳೆದ ಇವರಿಗೆ ಭತ್ತ, ಎಳ್ಳು ಮತ್ತು ಉದ್ದು ಬೆಳೆಗಳನ್ನು ಸಹಜವಾಗಿ ನೋಡಿ ಕಲಿತು ಬಂದವರಾಗಿದ್ದರು. ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದ ಇವರು ಮದುವೆಯಾಗಿ ತನ್ನ ಗಂಡನ ಮನೆ ಸೇರಿದ್ದ ಇವರು ತನ್ನ ಶಾಲೆಯಲ್ಲಿಯೂ ಗಾರ್ಡನ್ ಬೆಳೆಸುವುದು. ತರಕಾರಿಗಳನ್ನು ಬೆಳೆಯುವ ಮೂಲಕ ಶಾಲಾ ಮಕ್ಕಳಿಗೆ ತನ್ನ ಶಾಲೆಯ ಆವರಣವನ್ನೇ ಪ್ರಯೋಗಾಲಯವನ್ನಾಗಿ ಮಾಡಿದವರು. ಇವರು ಬೆಳೆಯುವ ತರಕಾರಿಯನ್ನು ಶಾಲೆಯ ಮಕ್ಕಳ ಬಿಸಿಯೂಟಕ್ಕೆ ಬಳಸಿದ್ದು ಉಂಟು.

**ಶ್ರೀಮತಿ ಶರಾವತಿ ಯು.ಆರ್.**
ಬಿನ್ ದಿ. ಪಿ.ರವಿರಾಜ್, ನಂ 15
ಎಲ್ಲೂರು ಅಂಚೆ, ಕಾಪು ತಾಲ್ಲೂಕ್
ಉಡುಪಿ ಜಿಲ್ಲೆ–574 113
ಮೊಬೈಲ್ 98453 37460

# ಕೃಷಿಯಲ್ಲಿ ಸಂತೃಪ್ತ ಭಾವ ಕಂಡುಕೊಂಡ

**ಶ್ರೀಮತಿ ಶರಾವತಿ ಯು.ಆರ್.**

ವೃತ್ತಿಯಲ್ಲಿ ಶಿಕ್ಷಕಿಯಾಗಿ, ಪ್ರವೃತ್ತಿಯಲ್ಲಿ ಕೃಷಿಕಳಾಗಿದ್ದ, ಶ್ರೀಮತಿ ಶರಾವತಿಯವರ ಕೃಷಿ ಬದುಕು ಕುತೊಹಲವನ್ನು ಮೂಡಿಸುತ್ತದೆ. ತನ್ನ ಬಾಲ್ಯವನ್ನು ಅಜ್ಜಿಯ ಮನೆಯ ಕೃಷಿಯ ವಾತಾವರಣದಲ್ಲಿ ಕಳೆದ ಇವರಿಗೆ ಭತ್ತ, ಎಳ್ಳು ಮತ್ತು ಉದ್ದು ಬೆಳೆಗಳನ್ನು ಸಹಜವಾಗಿ ನೋಡಿ ಕಲಿತು ಬಂದವರಾಗಿದ್ದರು. ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದ ಇವರು ಮದುವೆಯಾಗಿ ತನ್ನ ಗಂಡನ ಮನೆ ಸೇರಿದ್ದ ಇವರು ತನ್ನ ಶಾಲೆಯಲ್ಲಿಯೂ ಗಾರ್ಡನ್ ಬೆಳೆಸುವುದು. ತರಕಾರಿಗಳನ್ನು ಬೆಳೆಯುವ ಮೂಲಕ ಶಾಲಾ ಮಕ್ಕಳಿಗೆ ತನ್ನ ಶಾಲೆಯ ಆವರಣವನ್ನೇ ಪ್ರಯೋಗಾಲಯವನ್ನಾಗಿ ಮಾಡಿದವರು. ಇವರು ಬೆಳೆಯುವ ತರಕಾರಿಯನ್ನು ಶಾಲೆಯ ಮಕ್ಕಳ ಬಿಸಿಯೂಟಕ್ಕೆ ಬಳಸಿದ್ದು ಉಂಟು.

ಉಡುಪಿ ಜಿಲ್ಲೆಯ ಕಾಪು ತಾಲ್ಲೂಕು ಎಲ್ಲೂರು ಗ್ರಾಮದ ವಾಸವಿದ್ದಾರೆ. ತನ್ನ ಗಂಡನ ಮನೆಯಲ್ಲಿದ್ದ 8 ಎಕರೆ ಜಮೀನಿನಲ್ಲಿ ವೈವಿಧ್ಯಮ ಬೆಳೆಗಳನ್ನು ಬೆಳೆಯುವ ಮೂಲಕ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಇವರ ಜಮೀನಿನಲ್ಲಿ ನೂರಾರು ಹಣ್ಣುಗಳ ಗಿಡಗಳನ್ನು ಬೆಳಸುತ್ತ ಬಂದಿದ್ದಾರೆ. ಇವರು 5 ಬಗೆಯ ಕಲರ್ ಜಾಮ್ ಗಿಡಗಳನ್ನು ಬೆಳೆಸಿದ್ದು, ಚಿಕ್ಕು, ಮಾವು, ಹಲಸು, ದೀವಿ ಹಲಸು, ದಾಳಿಂಬೆ, ರಾಮಫಲ, ಸೀತಾಫಲ, ಹನುಮಾನ್ ಫಲ, ಗಮ್‌ಲೆಸ್ ಹಲಸು, ಚಂದ್ರಬಾಳೆ, ನೇರಳೆ, ಅರ್ಧ ಎಕರೆಯಲ್ಲಿ ಅರಿಶಿಣ, ಮಾವಿನ ಶುಂಠಿ, ವಿವಿಧ ಬಗೆಯ ಹೂವಿನ ಗಿಡಗಳನ್ನು ಬೆಳೆಸಿದ್ದಾರೆ.

ಇವರು ವಿವಿಧ ಬಗೆಯ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದು, ಬಿಳಿ ಬೆಂಡೆ, ಬಸಳೆ, ಮೀಟರ್ ಅಲಸಂದೆ, ವೀಳ್ಯೆದೆಲೆ, ಕರಿಬೇವು, ಕಾಫಿ, ಏಲಕ್ಕಿ, ಹಿಪ್ಪಲಿ, ಬಟರ್ ಫ್ರೂಟ್, ಪೈನಾಪಲ್, 100 ಗೇರು ಗಿಡಗಳನ್ನು ಬೆಳೆಸಿದ್ದಾರೆ. ಅಲ್ಲದೆ ಗಜಲಿಂಬೆ, ನೆಲ್ಲಿಕಾಯಿ, ಅಂಜೂರ, ಸಕ್ಕರೆ ಕಂಚು, ಪೇರಳೆ ಕಾಳು ಮೆಣಸು, ಹಣೆ ಕಣ್ಣು ಮರ,





ಅಡಿಕೆ ತೆಂಗು ತೋಟಗಾರಿಕೆ ಬೆಳೆಗಳನ್ನು ಸಹ ಬೆಳೆದಿರುತ್ತಾರೆ.



ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸಿಕೊಂಡು, ಖರ್ಚು ಕಡಿಮೆಯಾಗುವಂತೆ ಮಾಡಿದ್ದಾರೆ. ಇವರು ಎರೆಗೊಬ್ಬರ, ಕೋಳಿ ಗೊಬ್ಬರ, ಜೈವಿಕ ಗೊಬ್ಬರ, ಸ್ಲರಿ, ಬೀಜಾಮೃತ, ಘನಜೀವಾಮೃತ ಮತ್ತು ಕಿರು ಪೋಷಕಾಂಶಗಳ ಬಳಕೆ, ಸ್ಲರಿ ಹಾಗೂ ಕಾಂಪೋಸ್ಟ್ ತಯಾರಿಕೆಯನ್ನು ತಮ್ಮ ಜಾಗದಲ್ಲೇ ತಯಾರು ಮಾಡಿ ತಮ್ಮ ಜಮೀನಿನಲ್ಲಿ ಬಳಸುತ್ತಿದ್ದಾರೆ.

ಸಮಗ್ರ ಕೃಷಿ ಪದ್ಧತಿಯನ್ನು ಎಲ್ಲಾ ರೈತರು ಮಾಡಬೇಕು, ಇದರೊಂದಿಗೆ ಅಂತರ್ ಬೆಳೆಗಳನ್ನು ಮಾಡುವುದರಿಂದ ಯಾವ ರೈತನಿಗೂ ಲಾಸ್ ಆಗುವುದಿಲ್ಲ. ಆಯಾ ಸೀಸನ್ ತಕ್ಕ ಬೆಳೆಗಳನ್ನು ಬೆಳೆಯುವುದರಿಂದ ರೈತ ತಾನು ಬೆಳೆದ ಬೆಳೆಗೆ ಸೂಕ್ತವಾದ ಬೆಲೆ ಪಡೆದು ಆರ್ಥಿಕ ಸುಸ್ಥಿರತೆಯನ್ನು ಪಡೆಯಬಹುದಾಗಿದೆ. ಅಲ್ಲದೆ ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ತರಬೇತಿ ನೀಡಿದ್ದಾರೆ. ಸುಮಾರು 50 ಸಾವಿರಕ್ಕೂ ಹೆಚ್ಚು ರೈತರಿಗೆ ಕೃಷಿಗೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಯನ್ನು ನೀಡಿದ್ದಾರೆ. ತಾನಷ್ಟೇ ಬೆಳೆದರೆ ಸಾಲದು, ಇತರೆ ರೈತರು ಕೃಷಿಯಲ್ಲಿ ಸಮೃದ್ಧ ಬದುಕನ್ನು ಕಾಣುವಂತಾಬೇಕೆಂಬ ಆಶಯವನ್ನು ಹೊಂದಿ ಇತರೆ ರೈತರಿಗೆ ಮಾರ್ಗದರ್ಶನ ಮಾಡುತ್ತಾ ಆದರ್ಶ ರೈತರಾಗಿದ್ದಾರೆ.

ನಾನು ಕೃಷಿಯಲ್ಲಿ ಸಂತೃಪ್ತ ಭಾವವನ್ನು ಕಂಡುಕೊಂಡಿದ್ದೇನೆ. ಕೃಷಿಯಲ್ಲಿ ಕಷ್ಟಪಟ್ಟು ಕೆಲಸ ಮಾಡಿದರೆ ನಮ್ಮ ಆರೋಗ್ಯ ತಾನೇ ತಾನಾಗಿ ಆರೋಗ್ಯ ಸುಧಾರಿಸುತ್ತದೆ. ಯಾವುದೇ ರೀತಿಯ ವಾಕಿಂಗ್‌ನ ಅವಶ್ಯಕತೆ ಇರುವುದಿಲ್ಲ. ನಮ್ಮ ತೋಟವನ್ನು ಒಂದು ಸುತ್ತು ಸುತ್ತಿ ಬಂದರೆ ಉತ್ತಮವಾದ ಗಾಳಿ, ವಾತಾವರಣ ಹಾಗೂ ನಮ್ಮ ಆರೋಗ್ಯವೂ ಸಹ



ಚೆನ್ನಾಗಿರುತ್ತದೆ. ಇವರ ಅತ್ಯುತ್ತಮ ಸಾಧನೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀಮತಿ ಶರಾವತಿ ಯು.ಆರ್.** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **“ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023”** ಅನ್ನು ನೀಡಿ ಗೌರವಿಸುತ್ತಿದೆ.







ತೋಟಗಾರಿಕೆ ಮತ್ತು ಅಡಿಕೆ ಬೆಳೆಯಲ್ಲಿ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಅಂತರದ ಬೆಳೆಯಾಗಿ ಬಾಳೆ ಮತ್ತು ಕಾಳುಮೆಣಸು ಬೆಳೆಗಳನ್ನು ಮೋತಿನಾಯ್ಕ್ ಅವರು ಯಶಸ್ವಿಯಾಗಿ ಬೆಳೆಯುತ್ತಿದ್ದಾರೆ. ಆಧುನಿಕ ತಾಂತ್ರಿಕತೆಯನ್ನು ತಾನು ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶನ ಮಾಡಿಕೊಂಡು ಬರುತ್ತಿರುವ ಮೋತಿನಾಯ್ಕ್ ಅವರು ಓರ್ವ ಪ್ರಗತಿಪರ ರೈತರಾಗಿದ್ದಾರೆ.

**ಶ್ರೀ ಮೋತಿ ನಾಯ್ಕ್**
ಬಿನ್ ಶಿವಪ್ಪ ನಾಯ್ಕ್
ಕವಳಿ ತಾಂಡ, ಕತ್ತಲಗೆರೆ (ಅಂಚೆ),
ಚನ್ನಗಿರಿ (ತಾ), ದಾವಣಗೆರೆ (ಜಿ)
ಮೊಬೈಲ್ : 8746049720

## ತೋಟಗಾರಿಕೆ ಬೆಳೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ

### ಮೋತಿನಾಯ್ಕ್

ತೋಟಗಾರಿಕೆ ಮತ್ತು ಅಡಿಕೆ ಬೆಳೆಯಲ್ಲಿ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಅಂತರದ ಬೆಳೆಯಾಗಿ ಬಾಳೆ ಮತ್ತು ಕಾಳುಮೆಣಸು ಬೆಳೆಗಳನ್ನು, ಮೋತಿನಾಯ್ಕ್ ಅವರು ಯಶಸ್ವಿಯಾಗಿ ಬೆಳೆಯುತ್ತಿದ್ದಾರೆ. ಆಧುನಿಕ ತಾಂತ್ರಿಕತೆಯನ್ನು ತಾನು ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶನ ಮಾಡಿಕೊಂಡುಬರುತ್ತಿರುವ ಮೋತಿನಾಯ್ಕ್ ಅವರು ಓರ್ವ ಪ್ರಗತಿಪರ ರೈತರಾಗಿದ್ದಾರೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ, ಕತ್ತಲಗೆರೆಯ ಬಳಿಯ ಕವಳಿತಾಂಡ ಎಂಬ ಪುಟ್ಟ ಗ್ರಾಮದ ಮೋತಿನಾಯ್ಕ್ ಅವರು ತಮ್ಮ ಎರಡು ಎಕರೆ ಜಮೀನಿನಲ್ಲಿ ಅಡಿಕೆ ಮತ್ತು ಅಂತರ್ ಬೆಳೆಗಳನ್ನು ಬೆಳೆಯುತ್ತಿದ್ದು, ತೋಟದ ಅಂಚಿನಲ್ಲಿ ಹಸಿರೆಲೆ ಗೊಬ್ಬರದ ಗ್ಲಿರಿಸಿಡಿಯಾ ಗಿಡಗಳನ್ನು ಬೆಳೆಯುತ್ತಿದ್ದಾರೆ. ಹೊಸ ಪ್ರಯೋಗವೆಂದು ದ್ರಾಕ್ಷಿ ಮತ್ತು ಸೇಬು ಬೆಳೆಯನ್ನು ಬೆಳೆದು ಈ ಭಾಗದ ಬೇರೆ ರೈತರು ಸಹ ಬೆಳೆಯಬಹುದೆಂದು ತೋರಿಸಿ ಕೊಟ್ಟಿರುತ್ತಾರೆ ಜೊತೆಗೆ ನೆರಳೆ, ಕಿತ್ತಳೆ, ಸಪೋಟ, ಮರಸೇಬು, ಸಿಲ್ವರ್ ಓಕ್, ತೇಗಾ, ಚಕ್ಕೆ, ಪಪ್ಪಾಯ, ಕಾಫಿ, ಕರಿಬೇವು ಮತ್ತು ಕಬ್ಬು ಹೀಗೆ 30 ಕ್ಕೂ ಹೆಚ್ಚು ವಿವಿಧ ರೀತಿಯ ಬೆಳೆಗಳನ್ನ ಇವರ ಜಮಿನಿನಲ್ಲಿ ನೋಡಬಹುದು. ಲಕ್ಷ್ಮೀ ತಳಿ ಎಂಬ ಅಧಿಕ ಇಳುವರಿ ಕೊಡುವ ಆರೋಗ್ಯಕರವಾದ ಅಡಿಕೆ ಸಸಿಗಳನ್ನು ಸ್ವತಃ ತಯಾರು ಮಾಡಿ ರೈತರಿಗೆ ಮಾರಟ ಮಾಡುತ್ತಿರುತ್ತಾರೆ. ಇವರ ವಿಶಿಷ್ಠ ಸಾಧನೆ ಎಂದರೆ ಶೀಘ್ರ ಸೊರಗು ರೋಗ ಕ್ರಿಮೀ ಕೀಟಕ್ಕೆ ಸ್ವತಃ ರಾಮಬಾಣವನ್ನು ತಯಾರಿಸುತ್ತಾರೆ ಹಾಗೂ ಇವರು ಶೂನ್ಯ ಬೇಸಾಯ ಹಾಗೂ ಸಮಗ್ರ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ.

ಆರಂಭದಲ್ಲಿ ಬರೀ ಅಡಿಕೆ ಬೆಳೆಯನ್ನು ಬೆಳೆಯಿತ್ತಿದ್ದ ಇವರು ಸದರಿ ಹಂಗಾಮಿನಲ್ಲಿ ಏಲಕ್ಕಿ ಬಾಳೆಯನ್ನು ಅಂತರ್ ಬೆಳೆಯಾಗಿ ಬೆಳೆದು ಹೆಚ್ಚುವರಿ ಆದಾಯ ಪಡೆದಿರುತ್ತಾರೆ. ಬಾಳೆ ಬೆಳೆಗೆ ರೋಗ ಬಾರದಂತೆ ಸಸ್ಯ ಸಂರಕ್ಷಣೆ ಮಾಡಿ ಉತ್ತಮ ಬೆಳೆಯನ್ನು ಬೆಳೆಯುತ್ತಿದ್ದಾರೆ. ಬಾಳೆ ಬೆಳೆಗೆ 8ನೇ ತಿಂಗಳಿನಲ್ಲಿ ಮೊನೊಕ್ರೊಟೊಪಾಸ್ 10 ಮಿಲೀ. ನೀರಿಗೆ 5ಮಿಲೀ. ದ್ರಾವಣ ಬೆರೆಸಿ ಅದರ ಜೊತೆಗೆ ಅರ್ಧಗ್ರಾಂನಷ್ಟು ಬನಾನ ಸ್ಪೆಷಲ್ ಮಿಶ್ರಣ ಮಾಡಿ ಸಿರಂಜಿನ ಸಹಾಯದಿಂದ ಬಾಳೆಗಿಡದ ಬುಡಕ್ಕೆ ಕೊಟ್ಟಿರುತ್ತಾರೆ. 9ನೇ ತಿಂಗಳಿನಲ್ಲಿ ರಾಸಾಯನಿಕ ಗೊಬ್ಬರವನ್ನು ನೀಡಿದ್ದು, ಬಾಳೆಗೊನೆಗೆ ಸಿಂಪಡಿಸಿ ಒಳ್ಳೆಯ ತೂಕ, ಬಣ್ಣ ಪಡೆದು ಮಾರುಕಟ್ಟೆಯಲ್ಲಿ ಯೋಗ್ಯವಾದ ಬೆಲೆಯನ್ನು ಪಡೆದಿರುತ್ತಾರೆ. ಈ ಅಡಿಕೆ ತೋಟದ ಅಂತರ್ ಬೆಳೆಯಾಗಿ ಒಬ್ಬ ವ್ಯಕ್ತಿಯು ನಿರಂತರವಾಗಿ 800 ಕಾಳು ಮೆಣಸಿನ ಬಳ್ಳಿಯನ್ನು ಕೈ

ಕೆಲಸದಿಂದಲೇ ಯಾವುದೇ ಖರ್ಚು ಇಲ್ಲದೆ ನಿರ್ವಹಿಸಬಹುದು ಎಂಬುದನ್ನು ತೋರಿದ್ದಾರೆ.

ಅರೆಮಲೆನಾಡು ಪ್ರದೇಶದ ಅಡಿಕೆ ತೋಟದ ಕಾಳು ಮೆಣಸು ಸಸಿಗಳನ್ನು ಕಳೆದ 5 ವರ್ಷಗಳ ಹಿಂದೆ ತಂದು ತಮ್ಮ ಅಡಿಕೆ ತೋಟದಲ್ಲಿ ನಾಟಿ ಮಾಡಿರುತ್ತಾರೆ. ಇವರು ಅಡಿಕೆ ಮರದ ಬುಡದಲ್ಲಿ ಹಿಪ್ಪಲಿ ಗಿಡವನ್ನು ಬೆಳೆಸಿ ಹಿಪ್ಪಲಿ ಗಿಡಕ್ಕೆ ಕಸಿ ಮಾಡಿರುವುದರಿಂದ ಶೀಘ್ರ ಸೊರಗು ರೋಗವನ್ನು ನಿಯಂತ್ರಿಸಿರುತ್ತಾರೆ. ಮೆಣಸಿನ ಬಳ್ಳಿಯ ಚಿಗುರನ್ನು ಮೂರು ತಿಂಗಳಿಗೊಮ್ಮೆ ಬಳ್ಳಿಯನ್ನು ಉರಿಯಿಂದ ಬೆಳೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಕಾಳು ಮೆಣಸು ಬೆಳೆಸುವ ವಿಧಾನದ ಜ್ಞಾನವನ್ನು ತನ್ನ ಅಕ್ಕಪಕ್ಕದಲ್ಲಿರುವ ರೈತರಿಗೆ ತಿಳಿಸಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಅಲ್ಲದೆ ತನ್ನ ಅಕ್ಕಪಕ್ಕದ ರೈತರ ತೋಟಗಳಿಗೆ ಭೇಟಿ ಕೊಟ್ಟು ಕಸಿ ವಿಧಾನವನ್ನು ತೋರಿಸಿಕೊಟ್ಟು ಹಾಗೂ ಅವರ ಕೈಯಿಂದಲೇ ಮಾಡಿಸಿಕೊಂಡು ಬಂದಿರುತ್ತಾರೆ.

ಇವರ ಬೆಳೆಗಳಿಗೆ ಸ್ವತಃ ಗೊಬ್ಬರವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದು, 10ಟನ್ ಹೊರಗಿನ ಮಣ್ಣು, 5ಟನ್ ಕುರಿಯ ಗೊಬ್ಬರ ಹಾಗೂ 50 ಲೀಟರ್ ಕುರಿ ಅಥವಾ ಹಸುವಿನ ಗಂಜಲ, 50 ಕೆಜಿ ದ್ವಿದಳ ಧಾನ್ಯದ ಪುಡಿ, 20 ಕೆಜಿ ಬೆಲ್ಲ, 10 ಲೀಟರ್ ಹಾಲು, 10 ಲೀಟರ್ ಮೊಸರು, 5 ಕೆಜಿ ಟ್ರೈಕೋಡರ್ಮ, 5 ಕಜಿ ಎಎಂಸಿ ಇವುಗಳನ್ನೆಲ್ಲಾ ಮಿಶ್ರಣ ಮಾಡಿ 15 ದಿನಗಳ ಕಾಲ ನೆರಳಿನಲ್ಲಿ ಮಾಗಿಸಿ ಈ ಉತ್ಕೃಷ್ಟವಾದ ಗೊಬ್ಬರವನ್ನು ಅಡಿಕೆ ಹಾಗೂ ಕಾಳುಮೆಣಸು ಬಳ್ಳಿಗೆ ಕೊಡುತ್ತಾ ಬಂದಿದ್ದಾರೆ. ಇದರಿಂದ ಉತ್ತಮ ಇಳುವರುನ್ನು ಬೆಳೆಗಳಿಂದಲೂ ಪಡೆಯುತ್ತಿದ್ದಾರೆ.

ಇವರು ವೈಜ್ಞಾನಿಕ ಮಾಹಿತಿಯನ್ನು ಕತ್ತಲಗೆರೆಯ ವಿಸ್ತರಣಾ ಶಿಕ್ಷಣ ಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿಗಳಿಂದ ಕಾಲ ಕಾಲಕ್ಕೆ ಸಂಪೂರ್ಣ ವೈಜ್ಞಾನಿಕ ಮಾಹಿತಿಯನ್ನು ಪಡೆದುಕೊಂಡು ಅವರ ಮಾರ್ಗದರ್ಶನದಂತೆ ಕೃಷಿ ಚಟುವಟಿಕೆಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯವು **ಶ್ರೀ ಮೋತಿ ನಾಯ್ಕ್ ಬಿನ್ ಶಿವಪ್ಪ ನಾಯ್ಕ್** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ " ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2022" ಅನ್ನು ನೀಡಿ ಗೌರವಿಸುತ್ತಿದೆ.



ಸಾಧನೆಯ ಹಾದಿಯಲ್ಲಿ ಹಲವಾರು ಅಡೆತಡೆಗಳು ಬರುವುದು ಸಹಜ. ಆ ಅಡೆತಡೆಗಳನ್ನು ದಾಟಿಕೊಂಡು ನಮ್ಮ ಗುರಿಯ ಕಡೆಗೆ ಸಾಗಿದರೆ ಯಶಸ್ಸು ನಮ್ಮ ಕಾಲಡಿಯಲ್ಲಿರುತ್ತದೆ ಎಂದು ಸಾಧಿಸಿ ತೋರಿಸಿದವರು ದಾವಣಗೆರೆ ಜಿಲ್ಲೆಯ ಹೆಬ್ಬಾಳು ಗ್ರಾಮದ ಶ್ರೀಮತಿ ಲಕ್ಷ್ಮೀ. ಅವರು ಹಲವು ನ್ಯೂನ್ಯತೆಗಳಿದ್ದ ತಮ್ಮ ಭೂಮಿಯನ್ನು ಫಲವತ್ತತೆಯ ಪ್ರತಿಬಿಂಬವಾಗಿ ಮಾರ್ಪಡಿಸಿ ಇಂದು ಯಶಸ್ವಿ ರೈತ ಮಹಿಳೆಯಾಗಿದ್ದಾರೆ.


**ಶ್ರೀಮತಿ ಲಕ್ಷ್ಮೀ ಐ. ಜೆ.**<br>
ಕೋಂ ಆರ್. ವಿ. ಅಶೋಕ್<br>
ಹೆಬ್ಬಾಳು ಬಡಾವಣೆ,<br>
ಹೆಬ್ಬಾಳು, ಆನಗೋಡು ಹೋಬಳಿ<br>
ದಾವಣಗೆರೆ(ತಾ), (ಜಿ.)<br>
ಮೊಬೈಲ್ : 9980153469

# ಆರ್ಥಿಕ ಸ್ವಾವಲಂಬನೆಗೆ ಸಮಗ್ರ ಕೃಷಿ ಪದ್ಧತಿ

**ಶ್ರೀಮತಿ ಲಕ್ಷ್ಮೀ**

ಸಾಧನೆಯ ಹಾದಿಯಲ್ಲಿ ಹಲವಾರು ಅಡೆತಡೆಗಳು ಬರುವುದು ಸಹಜ. ಅಡೆತಡೆಗಳನ್ನು ದಾಟಿಕೊಂಡು ನಮ್ಮ ಗುರಿಯ ಕಡೆಗೆ ಸಾಗಿದರೆ ಯಶಸ್ಸು ನಮ್ಮ ಕಾಲಡಿಯಲ್ಲಿರುತ್ತದೆ ಎಂದು ಸಾಧಿಸಿ ತೋರಿಸಿದವರು ದಾವಣಗೆರೆ ಜಿಲ್ಲೆಯ ಹೆಬ್ಬಾಳು ಗ್ರಾಮದ ಶ್ರೀಮತಿ ಲಕ್ಷ್ಮೀ. ಅವರು ಹಲವು ನ್ಯೂನ್ಯತೆಗಳಿದ್ದ ತಮ್ಮ ಭೂಮಿಯನ್ನು ಫಲವತ್ತತೆಯ ಪ್ರತಿಬಿಂಬವಾಗಿ ಮಾರ್ಪಡಿಸಿ ಇಂದು ಯಶಸ್ವಿ ರೈತ ಮಹಿಳೆಯಾಗಿದ್ದಾರೆ.

ಕೃಷಿ ಜೊತೆಗೆ ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿರುವುದು ಇವರ ವಿಶೇಷ , ಕೃಷಿಯ ಬಗೆಗಿನ ಹೆಚ್ಚಿನ ಜ್ಞಾನವನ್ನು ಸಂಪಾದಿಸಲು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗದ ವಿಸ್ತರಣ ಶಿಕ್ಷಣ ಘಟಕ ಕತ್ತಲಗೆರೆಯಲ್ಲಿ ಕೃಷಿ ಬಗೆಗಿನ ಹೆಚ್ಚಿನ ತರಬೇತಿ ಹಾಗೂ ಮಹಿತಿ ಪಡೆದು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ತಮ್ಮ ಜಮೀನಿನಲ್ಲಿ ಎರಹುಳು ಘಟಕ, ಅಜೋಲ್ಲಾ ಘಟಕ, ಜೀವಾಮೃತ ಬಳಕೆ, ಸುಧಾರಿತ ಕಾಂಪೋಸ್ಟ್ ಗೊಬ್ಬರ ಬಳಕೆ, ಸೋಲಾರ್ ಚಾಲಿತ ಬೋರ್‌ವೆಲ್ ಅಳವಡಿಕೆ, ಮಳೆನೀರು ಕ್ಯೂಲು ಪದ್ಧತಿ ಆದರಿಸಿ ಕೃಷಿ ಹೊಂಡವನ್ನು (6.00 ಲಕ್ಷ) ನಿರ್ಮಾಣ ಮಾಡಿ ಅದರಲ್ಲಿ ಮೀನು ಸಾಕಾಣಿಕೆ ಮಾಡುವ ಮೂಲಕ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.

ಇವರು ತಿಪಟೂರು ಟಾಲ್ ತಳಿಯ ತೆಂಗಿನ ಮರಗಳನ್ನು ಜಿಗ್-ಜಾಗ್ ಮಾದರಿಯಲ್ಲಿ ನಾಟಿ ಮಾಡಿರುತ್ತಾರೆ ಈ ನವಿನ ನಾಟಿ ಮಾದರಿಯಲ್ಲಿ ಕಡಿಮೆ ವಿಸ್ತಿರ್ಣ ಮತ್ತು ಕಡಿಮೆ ನೀರು ಬಳಸಿಕೊಂಡು ಹಚ್ಚಿನ ಇಳುವರಿ ಪಡೆದುಕೊಂಡಿರುತ್ತಾರೆ. ತಮ್ಮ ಅಡಿಕೆ ತೋಟದಲ್ಲಿ ಕಾಳುಮೆಣಸನ್ನು ಬೆಳೆಯುತ್ತಿದ್ದು, ಕಾಳುಮೆಣಸಿನಿಂದ ಉತ್ತಮ ಆದಾಯವನ್ನು ಪಡೆದಿರುತ್ತಾರೆ, ಒಂದು ಎಕರೆ ಪಪ್ಪಾಯ, ನುಗ್ಗೆ, ಅಲಸಂಧಿ ಮತ್ತು ಕರಿಬೇವು ಗಿಡಗಳನ್ನು ಸಹ ಬೆಳೆದು ಆದಾಯವನ್ನು ದ್ವಿಗುಣಗೊಳಿಸಿಕೊಂಡಿರುತ್ತಾರೆ, ಇವರು ಎರಡು ಎಕರೆ ಪ್ರದೇಶದಲ್ಲಿ ತೇಗ, ಸಿಲ್ವರ್ ಓಕ್, ಬೆಣ್ಣೆ ಹಣ್ಣು, ನೇರಳೆ, ಹೊಂಗೆ, ಬೇವು ಮರಗಳನ್ನು ಬೆಳೆಸಿ ಅರಣ್ಯ ಕೃಷಿಯಲ್ಲಿ ಕೂಡ ತೊಡಗಿಸಿಕೊಂಡಿದ್ದಾರೆ. ಮಹಿಳಾ ಸ್ವಸಹಾಯ ಗುಂಪು ಹಾಗೂ ಇನ್ನರ್‌ವಿಲ್ ಸಂಸ್ಥೆಯ ಸದಸ್ಯರಾಗಿ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶದ ರೈತ ಮಹಿಳೆಯರ ಆರ್ಥಿಕವಾಗಿ ಸಬಲರಾಗಲು ನೆರವು ನೀಡಿ ಓರ್ವ ಪ್ರಗತಿಶೀಲ ರೈತ ಮಹಿಳೆಯಾಗಿ ಹೊರಹೊಮ್ಮಿದ್ದಾರೆ.

ಸಮಗ್ರ ಕೃಷಿ ಪದ್ದತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯವು **ಶ್ರೀಮತಿ ಲಕ್ಷ್ಮೀ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ " ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ-2022" ಅನ್ನು ನೀಡಿ ಗೌರವಿಸುತ್ತಿದೆ.



ದಕ್ಷಿಣ ಕನ್ನಡದ ಒಂದು ಪುಟ್ಟ ಹಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದ ತಂದೆ ತಾಯಿಗಳನ್ನು ಚಿಕ್ಕ ವಯಸ್ಸಿನಲ್ಲಿಯೇ ಕಳೆದುಕೊಂಡ ಇವರಿಗೆ ಕೃಷಿಯೇ ಇವರ ಬದುಕನ್ನು ಸುಂದರಗೊಳಿಸಿದ ಸಾಹಸ ಗಾಥೆಯಿದು. ಕೃಷಿಯನ್ನು ಒಂದು ಸವಾಲಾಗಿ ತೆಗೆದುಕೊಂಡು, ಅದನ್ನು ಉದ್ದಿಮೆಯಾಗಿ ಮಾರ್ಪಡಿಸಿ, ಉದ್ಯೋಗ ಸೃಷ್ಟಿಸಿ, ಕೃಷಿಯನ್ನು ಕಂಪೆನಿಯನ್ನಾಗಿ ರೂಪಿಸಿ ತನಗೂ ಹಾಗೂ ಇತರ ರೈತರಿಗೆ ಲಾಭದಾಯಕವಾಗಿ ಮಾಡಿದ್ದಲ್ಲದೆ, ಇತರೆ ಯುವಕರಿಗೆ ಮಾದರಿ ಕೃಷಿಕರಾಗಿದ್ದಾರೆ.

**ಶ್ರೀ ನಾಗರಾಜ ಶೆಟ್ಟಿ**
ಬಿನ್ ಮುದ್ದು ಶೆಟ್ಟಿ
ಸಪ್ತಗಿರಿಧಾಮ, ಅಂಬೂರಿ ಮನೆ
ಬೆಳುವಾಯಿ ಗ್ರಾಮ,
ಅಂಚೆ ಮೂಡುಬಿದಿರೆ
ದಕ್ಷಿಣ ಕನ್ನಡ ಜಿಲ್ಲೆ–574 213
ಮೊಬೈಲ್ : 9901730281

# ಕೃಷಿಯನ್ನು ಉದ್ದಿಮೆಯಾಗಿ ರೂಪಿಸಿದ

## ಶ್ರೀ ನಾಗರಾಜ ಶೆಟ್ಟಿ

ದಕ್ಷಿಣ ಕನ್ನಡದ ಒಂದು ಪುಟ್ಟ ಹಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದ ತಂದೆ ತಾಯಿಗಳನ್ನು ಚಿಕ್ಕ ವಯಸ್ಸಿನಲ್ಲಿಯೇ ಕಳೆದುಕೊಂಡ ಇವರಿಗೆ ಕೃಷಿಯೇ ಇವರ ಬದುಕನ್ನು ಸುಂದರಗೊಳಿಸಿದ ಸಾಹಸ ಗಾಥೆಯಿದು. ಕೃಷಿಯನ್ನು ಒಂದು ಸವಾಲಾಗಿ ತೆಗೆದುಕೊಂಡು, ಅದನ್ನು ಉದ್ದಿಮೆಯಾಗಿ ಮಾರ್ಪಡಿಸಿ, ಉದ್ಯೋಗ ಸೃಷ್ಟಿಸಿ, ಕೃಷಿಯನ್ನು ಕಂಪೆನಿಯನ್ನಾಗಿ ರೂಪಿಸಿ ತನಗೂ ಹಾಗೂ ಇತರ ರೈತರಿಗೆ ಲಾಭದಾಯಕವಾಗಿ ಮಾಡಿದ್ದಲ್ಲದೆ, ಇತರೆ ಯುವಕರಿಗೆ ಮಾದರಿ ಕೃಷಿಕರಾಗಿದ್ದಾರೆ.

ಶ್ರೀಯುತ ನಾಗರಾಜ ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲೂಕಿನ ಬೆಳುವಾಯಿ ಗ್ರಾಮದವರು. ತಮ್ಮ 11 ಎಕರೆ ಕೃಷಿ ಭೂಮಿಯಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು, ಕೃಷಿಯಲ್ಲಿ ಮಹತ್ತರ ಸಾಧನೆಯನ್ನು ಮಾಡಿದ್ದಾರೆ.

ಇವರು ಕೃಷಿಯಲ್ಲಿ ತೊಡಗುವ ಮುನ್ನ, ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳ ಮಾರ್ಗದರ್ಶನದೊಂದಿಗೆ ಆಧುನಿಕ ಕೃಷಿ ತರಬೇತಿ ಪಡೆದು ದೊಡ್ಡ ಪ್ರಮಾಣದಲ್ಲಿ ಅನಾನಸು ಕೃಷಿಯನ್ನು ಒಂದು ಲಕ್ಷ ಗಿಡಗಳೊಂದಿಗೆ ಪ್ರಾರಂಭಿಸಿರುತ್ತಾರೆ. ಅನಾನಸು ಕೃಷಿಯನ್ನು ಮುಂಬಯಿ ದೆಹಲಿಗೆ ರಫ್ತು ಮಾಡಿರುತ್ತಾರೆ. ಕ್ರಮೇಣ ನೆರೆಮನೆಯವರ ನೆರವಿನಿಂದ ವಿದೇಶ ರಫ್ತು ಲೆಸೆನ್ಸ್ ಮುಖಾಂತರ ವಿದೇಶಕ್ಕೆ ಅನಾನಸನ್ನು ರಫ್ತು ಮಾಡತೊಡಗಿದರು. ಅನಂತರದಲ್ಲಿ ಇವರು ಕೃಷಿಯಲ್ಲಿ ನಡೆದದ್ದೇ ದಾರಿಯಾಯಿತು.

ಇವರು ತಮ್ಮ ಜಮೀನಿನಲ್ಲಿ ವಿವಿಧ ಕೃಷಿ, ತೋಟಗಾರಿಕೆ ಬೆಳೆಗಳಾದ ಭತ್ತ, ಅಡಿಕೆ, ತೆಂಗು, ಬಾಳೆ ಕಾಳುಮೆಣಸು, ವಿವಿಧ ತರಕಾರಿಗಳು, ಅನಾನಸು





ಇತ್ಯಾದಿಗಳನ್ನು ಬೆಳೆಯುತ್ತಿದ್ದಾರೆ. ಇವರು ಕೃಷಿಯೊಂದಿಗೆ ಹೈನುಗಾರಿಕೆ, ಮೀನುಸಾಕಣೆ ಮತ್ತು ಕೋಳಿಸಾಕಣೆಯನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ. ಇವರು ಬೆಳೆದಂತಹ ಫಸಲಗಳನ್ನು ವಿದೇಶಗಳಿಗೆ ರಫ್ತು ಮಾಡುವುದರ ಮೂಲಕ ಅಧಿಕ ಆದಾಯವನ್ನು ಪಡೆಯುತ್ತಿದ್ದಾರೆ.

ಇವರು ಜಾನುವಾರುಗಳನ್ನು ಸಾಕುವ ಮೂಲಕ ಅಂದರೆ 1000 ಕೋಳಿ ಸಾಕಣೆ ಕೋಳಿ ಗೊಬ್ಬರ, ಸಗಣಿ, ಭತ್ತದ ಚಿಪ್ಪಿನ ಬೂದಿ, ಕೊಳೆತ ತರಕಾರಿಗಳು ಹಾಗೂ ಹಣ್ಣು ಹಂಪಲುಗಳನ್ನು ಮರುಬಳಕೆ ಮಾಡುವ ಮೂಲಕ ತಮ್ಮ ಜಮೀನಿನ ಖರ್ಚುಗಳನ್ನು ಕಡಿಮೆಯಾಗುವಂತೆ ಮಾಡಿಕೊಂಡಿದ್ದಾರೆ. ಮಳೆನೀರನ್ನು ಕೃಷಿ ಹೊಂಡಗಳಲ್ಲಿ ಸಂಗ್ರಹಿಸಿ, ನೀರನ್ನು ಕೃಷಿ ಬೆಳೆಗಳಿಗೆ ಉಪಯೋಗಿಸುತ್ತಾ, ನೀರಿನ ಸಮರ್ಪಕ ಬಳಕೆ ಮಾಡುತ್ತಿದ್ದಾರೆ.



ಶ್ರೀಯುತರು ಕೃಷಿ ಸಂಬಂಧಿತ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದು, ದೆಹಲಿಯ ಎಂಪೈರ್ ಯುನಿವರ್ಸಿಟಿಯಿಂದ "ಗೌರವ ಡಾಕ್ಟರೇಟ್"ನ್ನು ಪದವಿಯನ್ನು ಪಡೆದಿರುತ್ತಾರೆ. ಮುಂದುವರೆದು ಪ್ರಜಾವಾಣಿ ಪತ್ರಿಕೆ ನಡೆಸಿದ ಜಿಲ್ಲಾ ಮಟ್ಟದ ಕೃಷಿಯಲ್ಲಿ "ಯುವಸಾಧಕ 2020"ಪುರಸ್ಕಾರ, ವಿಜಯಕರ್ನಾಟಕ ಪತ್ರಿಕೆಯಿಂದ ಜಿಲ್ಲಾಮಟ್ಟದ "ಸೂಪರ್‌ಸ್ಟಾರ್‌ರೈತ" ಪುರಸ್ಕಾರ, ಕೃಷಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಸಮಗ್ರ ಬೆಳೆ ಪದ್ಧತಿ ವಿಭಾಗದಲ್ಲಿ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು

**ಶ್ರೀ ನಾಗರಾಜಶೆಟ್ಟಿ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.













ನನಗೆ ಕೃಷಿಯಲ್ಲಿ ಸಂತಸ ದೊರೆತಿದೆ, ಹೇಗೆಂದರೆ ಬೆಳಿಗ್ಗೆ ಎದ್ದು ತೋಟಕ್ಕೆ ಹೋದರೆ ಶುದ್ಧಗಾಳಿ, ನೀರು, ಉತ್ತಮ ವಾತಾವರಣ, ಕಣ್ಣಿಗೆ ಗ್ರೀನರಿ ಎಲ್ಲವೂ ದೊರೆಯುತ್ತದೆ. ನಾವು ಆಲೋಚನೆ ಮಾಡಿ ಕೃಷಿ ಮಾಡಿದರೆ ಖಂಡಿತ ಯಶಸ್ಸು ಸಿಗುತ್ತೆ. ಕೃಷಿ ಸಂಬಂಧಿಸಿದಂತೆ ಬೆಳೆಗಳಿಗೆ ಪೋಷಕಾಂಶ ಕೊಡುವ ಬಗೆ, ವಾತಾವರಣ, ಆಯಾ ಸೀಸನ್ ತಕ್ಕಂತಹ ಬೆಳೆ, ಈ ರೀತಿಯ ಮಾಹಿತಿಯ ಸಂಪನ್ಮೂಲಗಳನ್ನು ನಾವು ಪಡೆದುಕೊಳ್ಳಬೇಕಾಗಿದೆ. ಯಾವುದೇ ಒಂದು ಬೆಳೆಗೆ ರೋಗ ಹೇಗೆ ಬರುತ್ತೆ, ಕೀಟದ ಬಾಧೆ ಹೇಗೆ ಆಗುತ್ತೆ ಎನ್ನುವ ಸೂಕ್ಷ್ಮ ತಿಳುವಳಿಕೆ ನಮ್ಮದಾಗಿರಬೇಕು. ಈ ಕುರಿತಂತೆ ಕೃಷಿ ವಿಶ್ವವಿದ್ಯಾಲಯಗಳು ಕೊಡುವಂತಹ ಸಂಶೋಧನೆಗಳು, ತಳಿಗಳು, ಆಧುನಿಕ ತಂತ್ರಜ್ಞಾನಗಳ ಬಗ್ಗೆ ನಾವು ತಿಳಿದುಕೊಳ್ಳಬೇಕಾಗಿದೆ. ಕೃಷಿ ಆಧಾರಿತ ಉದ್ದಿಮೆ ಸ್ಥಾಪಿಸಿ ಅದರಲ್ಲಿ ಹೇಗೆ ಯಶಸ್ಸನ್ನು ಗಳಿಸಬಹುದು ಎಂಬುದನ್ನು ನಾನು ಅಧ್ಯಯನವು ಕೂಡಾ ಈ ನಿಟ್ಟಿನಲ್ಲಿ ಸಾಗುತ್ತಿದೆ. ಸರ್ಕಾರಿ ಯೋಜನೆಗಳ ಬಗ್ಗೆ ನಾನು ಸ್ಟಡಿ ಮಾಡುತ್ತಿದ್ದೇನೆ. ಕೃಷಿಯಲ್ಲಿ ಪ್ಲಾನಿಂಗ್ ಮ್ಯಾನೇಜ್‌ಮೆಂಟ್ ಮೊದಲಿಗಿಂತ ಇಂದಿನ ದಿನಗಳಲ್ಲಿ ತೀರಾ ಅಗತ್ಯ ಎಂದು ತಮ್ಮ ಅನುಭವದ ಮಾತುಗಳನ್ನು ನುಡಿಯುತ್ತಾರೆ ಡಾ. ಆಶಾರವರು.

**ಡಾ. ಆಶಾ ಶಂಕರ್ ಭಂಡಾರಿ**
ಕೋಂ ಎಚ್. ಶಂಕರ್ ಭಂಡಾರಿ
ಡಿಂಬ್ರಿ ಮನೆ, ಕುರಿಯ ಗ್ರಾಮ ಮತ್ತು ಪೋಸ್ಟ್
ಪುತ್ತೂರು ಹೋಬಳಿ ಮತ್ತು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ
ಮೊಬೈಲ್ 8884000072

# ಕೃಷಿಯಲ್ಲಿ ಪ್ಲಾನಿಂಗ್ ಮ್ಯಾನೇಜ್‌ಮೆಂಟ್ ಇರಬೇಕು

**ಡಾ. ಆಶಾ ಶಂಕರ್ ಭಂಡಾರಿ**

ನನಗೆ ಕೃಷಿಯಲ್ಲಿ ಸಂತಸ ದೊರೆತಿದೆ, ಹೇಗೆಂದರೆ ಬೆಳಿಗ್ಗೆ ಎದ್ದು ತೋಟಕ್ಕೆ ಹೋದರೆ ಶುದ್ಧಗಾಳಿ, ನೀರು, ಉತ್ತಮ ವಾತಾವರಣ, ಕಣ್ಣಿಗೆ ಗ್ರೀನರಿ ಎಲ್ಲವೂ ದೊರೆಯುತ್ತದೆ. ನಾವು ಆಲೋಚನೆ ಮಾಡಿ ಕೃಷಿ ಮಾಡಿದರೆ ಖಂಡಿತ ಯಶಸ್ಸು ಸಿಗುತ್ತೆ. ಕೃಷಿ ಸಂಬಂಧಿಸಿದಂತೆ ಬೆಳೆಗಳಿಗೆ ಪೋಷಕಾಂಶ ಕೊಡುವ ಬಗೆ, ವಾತಾವರಣ, ಆಯಾ ಸೀಸನ್ ತಕ್ಕಂತಹ ಬೆಳೆ, ಈ ರೀತಿಯ ಮಾಹಿತಿಯ ಸಂಪನ್ಮೂಲಗಳನ್ನು ನಾವು ಪಡೆದುಕೊಳ್ಳಬೇಕಾಗಿದೆ. ಯಾವುದೇ ಒಂದು ಬೆಳೆಗೆ ರೋಗ ಹೇಗೆ ಬರುತ್ತೆ, ಕೀಟದ ಬಾಧೆ ಹೇಗೆ ಆಗುತ್ತೆ ಎನ್ನುವ ಸೂಕ್ಷ್ಮ ತಿಳುವಳಿಕೆ ನಮ್ಮದಾಗಿರಬೇಕು. ಈ ಕುರಿತಂತೆ ಕೃಷಿ ವಿಶ್ವವಿದ್ಯಾಲಯಗಳು ಕೊಡುವಂತಹ ಸಂಶೋಧನೆಗಳು, ತಳಿಗಳು, ಆಧುನಿಕ ತಂತ್ರಜ್ಞಾನಗಳ ಬಗ್ಗೆ ನಾವು ತಿಳಿದುಕೊಳ್ಳಬೇಕಾಗಿದೆ. ಕೃಷಿ ಆಧಾರಿತ ಉದ್ದಿಮೆ ಸ್ಥಾಪಿಸಿ ಅದರಲ್ಲಿ ಹೇಗೆ ಯಶಸ್ಸನ್ನು ಗಳಿಸಬಹುದು ಎಂಬುದನ್ನು ನಾನು ಅಧ್ಯಯನವು ಕೂಡಾ ಈ ನಿಟ್ಟಿನಲ್ಲಿ ಸಾಗುತ್ತಿದೆ. ಸರ್ಕಾರಿ ಯೋಜನೆಗಳ ಬಗ್ಗೆ ನಾನು ಸ್ಟಡಿ ಮಾಡುತ್ತಿದ್ದೇನೆ. ಕೃಷಿಯಲ್ಲಿ ಪ್ಲಾನಿಂಗ್ ಮ್ಯಾನೇಜ್‌ಮೆಂಟ್ ಮೊದಲಿಗಿಂತ ಇಂದಿನ ದಿನಗಳಲ್ಲಿ ತೀರಾ ಅಗತ್ಯ ಎಂದು ತಮ್ಮ ಅನುಭವದ ಮಾತುಗಳನ್ನು ನುಡಿಯುತ್ತಾರೆ ಡಾ. ಆಶಾರವರು.

ಡಾ. ಆಶಾರವರು ತಮ್ಮ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ವಿದ್ಯಾಭ್ಯಾಸವನ್ನು ಪುತ್ತೂರಿನಲ್ಲಿ ಮಾಡಿದ್ದಾರೆ. ಮುಂದೆ ಪದವಿ ಶಿಕ್ಷಣದೊಂದಿಗೆ ಎಂ. ಎಸ್. ಡಬ್ಲ್ಯೂ ಮತ್ತು ಪಿ.ಎಚ್. ಡಿ. ಯನ್ನು ಮೈಸೂರಿನಲ್ಲಿ ಮುಗಿಸಿ, ಸುಮಾರು





ಎರಡು ದಶಕಗಳಿಂದ ಕರ್ನಾಟಕ ಸರಕಾರ ಮತ್ತು ಹಲವಾರು ಭಾರತೀಯ ಹಾಗೂ ಮಲ್ಟಿ ನ್ಯಾಷನಲ್ ಕಾರ್ಪೊರೇಟ್ ಕಂಪೆನಿಗಳಲ್ಲಿ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ನಿರ್ವಹಿಸಿದ್ದಾರೆ.

ಮಂಗಳೂರು ಮತ್ತು ಮೈಸೂರಿನಲ್ಲಿದ್ದ ಕರ್ನಾಟಕ ರಾಜ್ಯ ಕ್ರೀಡಾ ಹಾಸ್ಟೆಲ್ ಗೆ ಆಯ್ಕೆಯಾಗಿ ಜಿಲ್ಲಾ ಮಟ್ಟ, ರಾಜ್ಯ ಮಟ್ಟ, ಯೂನಿವರ್ಸಿಟಿ ಮಟ್ಟ ಹಾಗೂ ಅಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹತ್ತು ಹಲವು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗಳನ್ನು ಗೆದ್ದುಕೊಂಡು ಕರ್ನಾಟಕ ರಾಜ್ಯ ಸರಕಾರದಿಂದ ಕ್ರೀಡಾ ಪ್ರತಿಭೆಯಾಗಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಡಾ. ಆಶಾಶಂಕರ್ ಭಂಡಾರಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕುರಿಯ ಗ್ರಾಮದವರು. ಜಪಾನ್, ಯು. ಎ. ಇ., ಡೆನ್ಮಾರ್ಕ್, ಸಿಂಗಾಪುರ್, ಚೀನಾ, ಹಾಂಗ್ ಕಾಂಗ್ ಮುಂತಾದ ದೇಶ–ವಿದೇಶಗಳ ನಗರ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರೂ, ಇಷ್ಟೆಲ್ಲಾ ಅನುಭವ ಇದ್ದ ಇವರು ತಂದೆಯವರ ವೃದ್ಧಾಪ್ಯದ ಕಾರಣ ಮನೆಯಲ್ಲಿ ಕೃಷಿ ಮಾಡುವ ಜವಾಬ್ದಾರಿಯನ್ನು ಇವರೇ ಹೊತ್ತು ಆಸಕ್ತಿಯಿಂದ ಎಲ್ಲಾ ರೀತಿಯ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಕೃಷಿ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಲೇ ಬೇಕೆಂಬ ಆಸಕ್ತಿಯಿಂದ ಇವರು ಕೃಷಿಗೆ ತೊಡಗುವ ಮುನ್ನ ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಮತ್ತು ಅರಣ್ಯ ಇಲಾಖೆಗಳ ಮಾರ್ಗದರ್ಶನದೊಂದಿಗೆ ಇವರ ಜಮೀನಿನಲ್ಲಿ ಸಮಗ್ರ ಕೃಷಿ

ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ 2.02 ಎಕರೆ ಭೂಮಿಯಲ್ಲಿ ಅಡಿಕೆ, ತೆಂಗು, ನೇರಳೆ, ನೆಲ್ಲಿ, ಸೀಬೆ, ರಾಮಫಲ, ಲಕ್ಷ್ಮಣಫಲ, ರಾಂಬೂಟಾನ್, ಬಾಳೆ, ಶ್ರೀಗಂಧ, ಚಂದನ, ಹಲಸು, ಮಹಾಗನಿ, ಬಿದಿರು, ಕೋಳಿ ಸಾಕಾಣೆ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ ಹೆಚ್ಚಿನ ಆದಾಯವನ್ನು ಪಡೆಯುತ್ತಿದ್ದಾರೆ.

ಅಡಿಕೆ, ತೆಂಗು ಮತ್ತು ಬಿದಿರಿನ ಎಲೆಗಳನ್ನು, ಅಡಿಕೆ, ತೆಂಗಿನ ಸಿಪ್ಪೆಗಳನ್ನು ಕೋಳಿಯ ಗೊಬ್ಬರದೊಂದಿಗೆ ಮಿಶ್ರಣ ಮಾಡಿ ಕಾಂಪೋಸ್ಟ್ ಆಗಿ ಅಡಿಕೆ ಮತ್ತು ತೆಂಗಿನ ಮರಗಳಿಗೆ ಉಪಯೋಗಿಸುತ್ತಿದ್ದಾರೆ. ಟ್ರಯಲ್ ಬೇಸಿಸ್‌ನಲ್ಲಿ ಉತ್ತಮಗುಣಮಟ್ಟದ ಕಾಳುಮೆಣಸಿನ ಪ್ಯಾಕೆಟ್ಟುಗಳನ್ನಾಗಿ ಮಾಡಿ ಮಾರಾಟ ಮಾಡಲು ಎಂ.ಎಸ್.ಎಂ.ಇಎಫ್.ಪಿ.ಒ ಮತ್ತು ಸಿ.ಎಫ್.ಟಿ.ಆರ್.ಐ ಮೈಸೂರಿನಿಂದ ಟ್ರೇನಿಂಗ್ ಪಡೆದಿರುತ್ತಾರೆ. ಊರಿನ ಹಲವು ಕೃಷಿಕರು ಇವರ ಕೃಷಿ ಪದ್ದತಿಯನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಬಂಜರು ಭೂಮಿಯನ್ನು ಅಭಿವೃದ್ದಿಪಡಿಸಿ ಅದನ್ನು ಕೃಷಿ ಮಾಡಲು ಯೋಗ್ಯ ಭೂಮಿಯನ್ನಾಗಿಸಿದ ಕೀರ್ತಿ ಇವರದ್ದಾಗಿದೆ. ಇವರ ಸಾಧನೆಯಿಂದ ಇವರು ವಿಟ್ಲ ತೆಂಗು ಬೆಳೆಗಾರರರ ಸಂಘ, ಪುತ್ತೂರು CAMPCO ಸಂಸ್ಥೆಯ ಅಡಿಕೆ ಬೆಳೆಗಾರರ ಸಂಘ ಮತ್ತು ಆರ್ಯಾಪು ವ್ಯವಸಾಯ ಸಂಘದ ಸದಸ್ಯತ್ವವನ್ನು ಪಡೆದುಕೊಂಡಿರುತ್ತಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಡಾ. ಆಶಾ ಶಂಕರ್ ಭಂಡಾರಿ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **"**ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023**"** ಅನ್ನು ನೀಡಿ ಗೌರವಿಸುತ್ತಿದೆ.



ಯಾವುದೇ ಕೆಲಸ ಆಗಲಿ ಮಾಹಿತಿಯನ್ನು ತಿಳಿದುಕೊಳ್ಳುವುದು ಮುಖ್ಯ. ನಮ್ಮ ಜೀವನದಲ್ಲಿ ಇದು ಆಗೊಲ್ಲ, ಅದು ಆಗೊಲ್ಲಾ ಚಿಂತಿಸದೆ ನಾವು ಎಲ್ಲಿ ಸೋತೆವು, ಸೋಲಿಗೆ ಕಾರಣವೇನು ತಿಳಿದುಕೊಳ್ಳಬೇಕು. ಕೃಷಿಯಲ್ಲಿ ಒಂದು ವೇಳೆ ಫೇಲ್ ಆಗಿದ್ದರೂ ಸಹಿತ ಆತ್ಮ ವಿಶ್ವಾಸದಿಂದ ಮಾಡಿದರೆ, ಖಂಡಿತವಾಗಿ ಮುಂದಿನ ಸಲ ಬಡ್ಡಿ ಸಮೇತ ಭೂಮಿತಾಯಿ ನಮಗೆ ವಾಪಸ್ ಕೊಡುತ್ತಾಳೆ. ಇವತ್ತು ದುಡ್ಡು ಮುಖ್ಯ ಅಲ್ಲ, ನೆಮ್ಮದಿ ಮುಖ್ಯ. ಕೃಷಿ ನಮಗೆ ನೆಮ್ಮದಿ ಕೊಡುತ್ತೆ, ಅರೋಗ್ಯ ಕೊಡುತ್ತೆ ಹಾಗೂ ಆಯುಷ್ಯವನ್ನು ಸಹ ಕೊಡುತ್ತೆ ಇದು ನನ್ನ ಅನುಭವದ ಮಾತಾಗಿದೆ ಎನ್ನುತ್ತಾರೆ ನಿಂಗಾನಾಯ್ಕರವರು.

**ಶ್ರೀ ನಿಂಗಾನಾಯ್ಕ ಟಿ.**
ಬಿನ್ ತೊಳಚೆನಾಯ್ಕ
ಹಳವದರ, ಚಿತ್ರದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ–577557
ಮೊಬೈಲ್: 9482916401

# ಸಮಗ್ರ ಕೃಷಿ ಪದ್ಧತಿಯಿಂದ ಆದಾಯ ದುಪ್ಪಟ್ಟು ಮಾಡಿಕೊಂಡ

**ಶ್ರೀ ನಿಂಗಾನಾಯ್ಕ**

ಯಾವುದೇ ಕೆಲಸ ಆಗಲಿ ಮಾಹಿತಿಯನ್ನು ತಿಳಿದುಕೊಳ್ಳುವುದು ಮುಖ್ಯ. ನಮ್ಮ ಜೀವನದಲ್ಲಿ ಇದು ಆಗೊಲ್ಲ, ಅದು ಆಗೊಲ್ಲಾ ಚಿಂತಿಸದೆ ನಾವು ಎಲ್ಲಿ ಸೋತೆವು, ಸೋಲಿಗೆ ಕಾರಣವೇನು ತಿಳಿದುಕೊಳ್ಳಬೇಕು. ಕೃಷಿಯಲ್ಲಿ ಒಂದು ವೇಳೆ ಫೇಲ್ ಆಗಿದ್ದರೂ ಸಹಿತ ಆತ್ಮ ವಿಶ್ವಾಸದಿಂದ ಮಾಡಿದರೆ, ಖಂಡಿತವಾಗಿ ಮುಂದಿನ ಸಲ ಬಡ್ಡಿ ಸಮೇತ ಭೂಮಿತಾಯಿ ನಮಗೆ ವಾಪಸ್ ಕೊಡುತ್ತಾಳೆ. ಇವತ್ತು ದುಡ್ಡು ಮುಖ್ಯ ಅಲ್ಲ, ನೆಮ್ಮದಿ ಮುಖ್ಯ. ಕೃಷಿ ನಮಗೆ ನೆಮ್ಮದಿ ಕೊಡುತ್ತೆ, ಅರೋಗ್ಯ ಕೊಡುತ್ತೆ ಹಾಗೂ ಆಯುಷ್ಯವನ್ನು ಸಹ ಕೊಡುತ್ತೆ ಇದು ನನ್ನ ಅನುಭವದ ಮಾತಾಗಿದೆ.

ನಿಂಗಾನಾಯ್ಕರವರು ಓದಿದ್ದು ಪಿಯುಸಿ, ಬಾಲ್ಯದಲ್ಲಿಯೇ ತಂದೆ ತಾಯಿಯ ಕೃಷಿ ಪರಿಸರದಲ್ಲಿ ಬೆಳೆದ ಇವರು ಕೃಷಿ ಚಟುವಟಿಕೆಗಳು ಸಹಜವಾಗಿ ಇವರಿಗೆ ಮೈಗೂಡಿಸಿಕೊಂಡಿವೆ. ಇವರು ಕೃಷಿ ಮಾಡುವ ಆರಂಭಿಸಿದ ಸಂದರ್ಭದಲ್ಲಿ ಒಣಬೇಸಾಯ ಪದ್ದತಿಯಲ್ಲಿ ಮೂರುವರೆ ಎಕರೆಯಲ್ಲಿ ಮೆಕ್ಕೆಜೋಳ ಬೆಳೆದು 70ಕ್ವಿಂಟಾಲ್ ಬೆಳೆಯೊಂದಿಗೆ ವರ್ಷಕ್ಕೆ 50,000/– ದಿಂದ 55,000/– ವರೆಗೆ ಆದಾಯ ಪಡೆಯುತ್ತಿದ್ದರು. ಆಗ ಹಣಕಾಸಿನ ಪರಿಸ್ಥಿತಿ ಸರಿಇರಲಿಲ್ಲ. ನಾವು ಮೊದಲು ಬೆಳೆಯುತ್ತಿದ್ದೆವು, ನಾನು ಮೇ ತಿಂಗಳಲ್ಲಿ ಹತ್ತಿ ನಾಟಿ ಮಾಡಿದ್ದೆ ಊರಿನ ಜನ ನನ್ನನ್ನು ನೋಡಿ ನಕ್ಕು ಅವಮಾನಿಸಿದ್ದರು. ದೇವರ ದಯೆಯಿಂದ ಅಲ್ಲಿಂದಲೇ ನನಗೆ ಕೃಷಿಯಲ್ಲಿ ಏನಾದರೂ ಸಾಧಿಸಲೇಬೇಕೆಂಬ ಸ್ಫೂರ್ತಿಬಂದಿದೆ.

ಅನಂತರ ಕೃಷಿ ವಿಜ್ಞಾನ ಕೇಂದ್ರ, ಹಿರಿಯೂರಿನ ವಿಜ್ಞಾನಿಗಳಿಂದ ಸಮಗ್ರ ಕೃಷಿ ಪದ್ದತಿಯ ಮಹತ್ವ, ಅಳವಡಿಸಿಕೊಳ್ಳುವ ರೀತಿ ಮತ್ತು ಅಳವಡಿಸಿಕೊಳ್ಳಬಹುದಾದ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಕೃಷಿಯಲ್ಲಿ ಅಂತರ್ ಬೆಳೆ ಪದ್ಧತಿ, ಅಂದರೆ ಮೆಕ್ಕೆಜೋಳದಲ್ಲಿ ಅವರೇ ಬೆಳೆಯತೊಡಗಿದೆ. ಭೂಮಿಯು ಸಹ ಅಷ್ಟೇ ಗಡುಸಾಗಿರುತ್ತಿತ್ತು. ಆಗಿನ ಕಾಲಕ್ಕೆ ಎರಡು ಜೊತೆ ಎತ್ತುಗಳ ಸಹಾಯದಿಂದ ಬೇಸಾಯ ಮಾಡಿದ್ದರಿಂದ ಉತ್ತಮ ಫಸಲನ್ನು ತೆಗೆಯಲು ಸಹಾಯವಾಯಿತು ಎನ್ನುತ್ತಾರೆ ನಿಂಗಾನಾಯ್ಕ ಅವರು.

ಕೃಷಿಯಲ್ಲಿ ಏನಾದರೂ ಮಾಡಲೇ ಬೇಕೆಂದು ಹಠತೊಟ್ಟ ಇವರು 2019 ರಲ್ಲಿ ಸಮಗ್ರ ಕೃಷಿ ಪದ್ದತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ನಿಂಗನಾಯ್ಕ ಅವರು ತಮ್ಮ ಜಮೀನಿನಲ್ಲಿ ಸೀತಾಫಲ, ಮೆಣಸಿನಕಾಯಿ, ಜಂಬುನೇರಳೆ, ಬಟರ್ ಫ್ರೂಟ್, ಎಗ್‌ಫ್ರೂಟ್, ಸೀಬೆ, ಮಾವು, ತೆಂಗು, ಪಪ್ಪಾಯ,

ಅರಿಶಿಣ, ಮೆಕ್ಕೆ ಜೋಳ ಬೆಳೆಯುತ್ತಿದ್ದಾರೆ. ಜಮೀನಿನ ಬದುಗಳಲ್ಲಿ ಏಲಕ್ಕಿ, ಕಾಳುಮೆಣಸು, ಬೆಟ್ಟದ ನೆಲ್ಲಿ, ಸಪೋಟ, ಸೇಬು, ಅಂಜೂರ, ಮೊಸಂಬಿ, ಕಿತ್ತಳೆ ಬೆಳೆಗಳನ್ನು ಬೆಳೆದಿದ್ದಾರೆ. ಮಲೆನಾಡಿನ ಸಂಬಾರು ಬೆಳೆಗಳು, ಅರಣ್ಯ ಕೃಷಿಯೊಂದಿಗೆ ಕಾಳುಮೆಣಸು, ಏಲಕ್ಕಿಯನ್ನು ಬೆಳೆಯುತ್ತಿದ್ದಾರೆ.

ಈ ಬೆಳೆಗಳ ಜೊತೆಗೆ ನಾಟಿಕೋಳಿ ಸಾಕಾಣಿಕೆ, ಮೊಲ ಸಾಕಾಣಿಕೆ ಹಾಗೂ ಕುರಿ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಎರೆಹುಳು ಗೊಬ್ಬರ ತೊಟ್ಟಿಯನ್ನು ಅಳವಡಿಸಿಕೊಂಡು ಅವರ ತೋಟಕ್ಕೆ ಅವಶ್ಯಕವಿರುವಷ್ಟು ಎರೆಹುಳು ಗೊಬ್ಬರವನ್ನು ಅವರೆ ತಯಾರಿಸಿಕೊಳ್ಳುತ್ತಿದ್ದಾರೆ. ಗುತ್ತಿಗೆ ಕೃಷಿ ಮೂಲಕ ಮೆಣಸಿನಕಾಯಿಯನ್ನು ನಿಂಜಾಕಾರ್ಟ ಖಾಸಗಿ ಸಂಸ್ಥೆಗೆ ಉತ್ತಮ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದುವರೆಗೂ ರೂ.1,50,000 ವರೆಗೆ ವಾರ್ಷಿಕ ಆದಾಯ ಪಡೆದಿದ್ದಾರೆ. ಅರ್ಕಾ ಸಹನ ಸೀತಾಫಲ ತಳಿಯನ್ನು ಬೆಳೆದಿದ್ದು, ಕೃತಕ ಪರಾಗಸ್ಪರ್ಶ ಮಾಡುವ ಬಗ್ಗೆ IIHR ನಿಂದ ತರಬೇತಿ ಪಡೆದ್ದಿದ್ದಾರೆ. ಸಮಗ್ರಕೃಷಿಯಲ್ಲಿ ಬಹು ಬಗೆಯ ಬೆಳೆಗಳನ್ನು ಬೆಳೆಯುವದರಿಂದ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ ಮತ್ತು ಏಕ ಬೆಳೆಯಿಂದಾಗುವ ನಷ್ಟದಿಂದ ತಪ್ಪಿಸಿಕೊಳ್ಳಬಹುದು. ಸಮಗ್ರ ಕೃಷಿ ಪದ್ದತಿಯ ಅಳವಡಿಕೆಯಿಂದ ನಿರೀಕ್ಷೆಯಂತೆ ಬೆಳೆ, ತಮ್ಮ ಭೂಮಿಯಲ್ಲಿ ಒಂದಿಂಚು ಜಾಗವನ್ನು ವೇಸ್ಟ್ ಮಾಡದೇ ಇವುಗಳಿಂದ ಉತ್ತಮ ಆದಾಯ ಪಡೆಯುತ್ತಿದ್ದೇನೆ ಎಂದು ನಿಂಗನಾಯ್ಕ ಸಂತಸ ವ್ಯಕ್ತಪಡಿಸುತ್ತಾರೆ.

ಇವರು ತಾವುಗಳು ತಿಳಿದ ಜ್ಞಾನವನ್ನು ತನ್ನ ಸುತ್ತಮುತ್ತಲಿರುವ ರೈತರಿಗೆ ಮಾಹಿತಿಯನ್ನು ಹೊಸ ಹೊಸ ತಂತ್ರಜ್ಞಾನಗಳನ್ನು ತಿಳಿಸಿಕೊಡುತ್ತಿದ್ದಾರೆ. ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಹಾಗೂ ಹಲವು ಸಂಸ್ಥೆ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀ ನಿಂಗಾನಾಯ್ಕ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.



ರೇಷ್ಮೆ ಬೆಳೆ ಲಾಭದಾಯಕ, ಪ್ರತಿ ಎರಡು ತಿಂಗಳಿಗೊಮ್ಮೆ ಹಣವನ್ನು ಪಡೆಯುವ ಎಟಿಎಂ ಇದ್ದ ಹಾಗೆ, ನಿರಂತರವಾಗಿ ಸರ್ಕಾರಿ ನೌಕರರು ಹೇಗೆ ತಿಂಗಳ ಸಂಬಳ ತೆಗೆದುಕೊಳ್ಳುತ್ತೀರೋ.. ಹಾಗೆ, ರೇಷ್ಮೆ ಕೃಷಿಯಲ್ಲಿ ಪಡೆದುಕೊಳ್ಳಬಹುದು. ಹೀಗಾಗಿ ರೇಷ್ಮೆ ಕೃಷಿ ನನ್ನ ಮನಸ್ಸಿಗೆ ತುಂಬಾ ಸಮಾಧಾನ ಹಾಗೂ ನೆಮ್ಮದಿಯನ್ನು ಕೊಟ್ಟಿದೆ. ಇದರಲ್ಲಿ ಬೆಲೆಗಳ ಏರುಪೇರು ಕಡಿಮೆ ಇರುತ್ತೆ. ಜೊತೆಗೆ ರೇಷ್ಮೆ ಕೃಷಿಯಲ್ಲಿ ಖರ್ಚು ಕಮ್ಮಿ, ಇದನ್ನು ಮನೆಯವರು ಎಲ್ಲರೂ ಸೇರಿ ದುಡಿಮೆ ಮಾಡಿದರೆ ಖಂಡಿತವಾಗಿ ಕೈತುಂಬಾ ಹಣ ಗಳಿಸಬಹುದು.

**ಶ್ರೀಮತಿ ಬಸಮ್ಮ**
ಬಿನ್ ಶಿವಕುಮಾರ್
ಜೆ. ಎನ್. ಕೋಟೆ
ಚಿತ್ರದುರ್ಗ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ–577557
ಮೊಬೈಲ್ : 8717 83401

# ರೇಷ್ಮೆ ಕೃಷಿಯಿಂದ ವರ್ಷಪೂರ್ತಿ ಆದಾಯ ಪಡೆಯಬಹುದು

**ಶ್ರೀಮತಿ ಬಸಮ್ಮ**

ರೇಷ್ಮೆ ಬೆಳೆ ಲಾಭದಾಯಕ, ಪ್ರತಿ ಎರಡು ತಿಂಗಳಿಗೊಮ್ಮೆ ಹಣವನ್ನು ಪಡೆಯುವ ಎಟಿಎಂ ಇದ್ದ ಹಾಗೆ, ನಿರಂತರವಾಗಿ ಸರ್ಕಾರಿ ನೌಕರರು ಹೇಗೆ ತಿಂಗಳ ಸಂಬಳ ತೆಗೆದುಕೊಳ್ಳುತ್ತೀರೋ.. ಹಾಗೆ, ರೇಷ್ಮೆ ಕೃಷಿಯಲ್ಲಿ ಪಡೆದುಕೊಳ್ಳಬಹುದು. ಹೀಗಾಗಿ ರೇಷ್ಮೆ ಕೃಷಿ ನನ್ನ ಮನಸ್ಸಿಗೆ ತುಂಬಾ ಸಮಾಧಾನ ಹಾಗೂ ನೆಮ್ಮದಿಯನ್ನು ಕೊಟ್ಟಿದೆ. ಇದರಲ್ಲಿ ಬೆಲೆಗಳ ಏರುಪೇರು ಕಡಿಮೆ ಇರುತ್ತೆ. ಜೊತೆಗೆ ರೇಷ್ಮೆ ಕೃಷಿಯಲ್ಲಿ ಖರ್ಚು ಕಮ್ಮಿ, ಇದನ್ನು ಮನೆಯವರು ಎಲ್ಲರೂ ಸೇರಿ ದುಡಿಮೆ ಮಾಡಿದರೆ ಖಂಡಿತವಾಗಿ ಕೈತುಂಬಾ ಹಣ ಗಳಿಸಬಹುದು.

ಚಿತ್ರದುರ್ಗ ಜಿಲ್ಲೆಯ ಜೆ.ಎನ್. ಕೋಟೆಯ 50 ವರ್ಷದ ಬಸಮ್ಮರವರು ಕಳೆದ 25ವರ್ಷಗಳಿಂದ ರೇಷ್ಮೆ ಕೃಷಿ ಮಾಡಿಕೊಂಡು ಬರುತ್ತಿದ್ದಾರೆ. ರೇಷ್ಮೆ ಕೃಷಿಯಲ್ಲಿ ನಾವು 2 ಬ್ಯಾಚ್ ಮಾಡಿಕೊಂಡು ವರ್ಷಕ್ಕೆ ಕನಿಷ್ಠ 10–11ಬೆಳೆಗಳನ್ನು ತೆಗೆಯುತ್ತೇವೆ. ನಮಗಿರುವ 5 ಎಕರೆ ಭೂಮಿಯಲ್ಲಿ 4ಎಕರೆಯಲ್ಲಿ 2 ಬ್ಯಾಚ್ ಮಾಡಿಕೊಂಡು ರೇಷ್ಮೆ ಕೃಷಿಯನ್ನು ಮಾಡುತ್ತಿದ್ದೇವೆ ಎಂದು ತಿಳಿಸುತ್ತಾರೆ ಬಸಮ್ಮರವರು.

ಕಳೆದ 25ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಹೂವು, ಈರುಳ್ಳಿ ಬೆಳೆದು ಲಾಸ್ ಆಗುತ್ತಿತ್ತು. ಆಗ ಒಮ್ಮೆ ಜಪಾನ್ ದೇಶದ ಕೃಷಿ ವಿಜ್ಞಾನಿಗಳು ನಮ್ಮ ಊರಿಗೆ ಭೇಟಿಕೊಟ್ಟಿದ್ದರು. ಅಂದು ಆ ಊರಿನಲ್ಲಿ ರೈತರನ್ನೆಲ್ಲಾ ಒಟ್ಟುಗೂಡಿಸಿ ರೇಷ್ಮೆ ಕೃಷಿಯನ್ನು ವೈಜ್ಞಾನಿಕವಾಗಿ ಮಾಡುವ ಬಗ್ಗೆ ತಿಳಿಸಿಕೊಟ್ಟಿದ್ದರು. ಆಗ ಆ ವಿಜ್ಞಾನಿಗಳು ನಮ್ಮ ಜಮೀನನ್ನು ಆಯ್ಕೆ ಮಾಡಿಕೊಂಡು, ರೇಷ್ಮೆ ಕೃಷಿ ಮಾಡುವ ಪ್ರಾತ್ಯಕ್ಷಿಕೆಯನ್ನು ಮಾಡಿ ತೋರಿಸಿದ್ದರು. ನಾವುಗಳು ಅಂದಿನಿಂದಲೂ ಇಂದಿನ ವರೆಗೆ ನಾವು ರೇಷ್ಮೆ ಕೃಷಿ ಮಾಡುವುದನ್ನು ನಾವು ಬಿಟ್ಟಿಲ್ಲ ಎನ್ನುತ್ತಾರೆ ಬಸಮ್ಮರವರು.

ಇವರು 25ನೇ ವಯಸ್ಸಿನಿಂದಲೇ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡು ಜೊತೆಗೆ ಮನೆ ಕೆಲಸದಲ್ಲಿಯೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಾಲ್ಕು ಎಕರೆ ಭೂಹಿಡುವಳಿಯಲ್ಲಿ ರೇಷ್ಮೆ ಸಾಕಾಣಿಕೆ, ಹಿಪ್ಪು ನೇರಳೆ ಸೊಪ್ಪು ಬೆಳೆಯುತ್ತಿದ್ದು, 1 ಎಕರೆ ತೋಟದಲ್ಲಿ ಅಡಿಕೆ ಹಾಗೂ ತೆಂಗು ಬೆಳೆಯನ್ನು ಬೆಳೆಯುತ್ತಿದ್ದಾರೆ.

ಬಸಮ್ಮನವರು ಹಿರಿಯ ತಲೆಮಾರಿನಿಂದಲ್ಲೂ, ಸುಮಾರು 25 ವರ್ಷದಿಂದಲ್ಲೂ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ಇವರಿಗೆ ಮಧ್ಯದಲ್ಲಿ ರೇಷ್ಮೆಗೆ

ಬೆಲೆ ಕಡಿಮೆ ಆದಕಾರಣ ರೇಷ್ಮೆ ಕೃಷಿಯನ್ನು ನಿಲ್ಲಿಸಿದ್ದರು. ಅನಂತರ ಬಸಮ್ಮರವರ ಮಗನಾದ ತೇಜಸ್ಸರವರು ಕೃಷಿಯಲ್ಲಿ ತೊಡಗಿಸಿಕೊಂಡು, ರೇಷ್ಮೆ ಕೃಷಿಯನ್ನು ಪುನಃ ಆರಂಭಿಸಿದ್ದಾರೆ. ಇವರು ಬೆಳೆದಂತಹ ರೇಷ್ಮೆ ಗೂಡಗಳನ್ನು ರಾಮನಗರಕ್ಕೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಉತ್ತಮ ಧಾರಣೆ ಪಡೆದು ತಮ್ಮ ಕುಟುಂಬದ ನಿರ್ವಹಣೆ ಮಾಡುತ್ತಿದ್ದಾರೆ.

ರೇಷ್ಮೆ ಕೃಷಿಯನ್ನು ವೈಜ್ಞಾನಿಕವಾಗಿ ಮಾಡುವ ಬಗ್ಗೆ ಬಸಮ್ಮರವರು ಮಾಹಿತಿಯನ್ನು ಚಿತ್ರದುರ್ಗದ ರೇಷ್ಮೆ ಇಲಾಖೆಯಿಂದ ಪಡೆಯುತ್ತಿದ್ದಾರೆ. ಬಬ್ಬೂರು ಫಾರಂನಲ್ಲಿರುವ ಕೃಷಿ ವಿಜ್ಞಾನ ಕೇಂದ್ರಕ್ಕೂ ಭೇಟಿಕೊಟ್ಟು ರೇಷ್ಮೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಕುರಿತಂತೆ ಮಾಹಿತಿ ಪಡೆದುಕೊಂಡಿದ್ದಾರೆ. ಅಲ್ಲದೆ ಇಲ್ಲಿ ನಡೆಯುವ ತರಬೇತಿ ಇತರೆ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಇವರು ಭಾಗವಹಿಸುತ್ತಾ ಬರುತ್ತಿದ್ದಾರೆ.

ಇವರು ರೇಷ್ಮೆ ಕೃಷಿಯನ್ನು ಮುಖ್ಯವಾಗಿ ಕಸುಬನ್ನಾಗಿ ಮಾಡಿಕೊಂಡು ವಾರ್ಷಿಕವಾಗಿ ಇವರು ರೂ 10,00,000ವರೆಗೆ ಆದಾಯ ಪಡೆಯುತ್ತಿದ್ದಾರೆ. ಕೇವಲ ಒಂದೇ ಬಗೆಯ ಕೃಷಿಯನ್ನು ಮಾಡಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಬಹುದೆಂದು ಇತರೆ ರೈತರಿಗೆ ತೋರಿಸಿಕೊಟ್ಟಿದ್ದಾರೆ. ಇವರು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ತಾವು ತಿಳಿದುಕೊಂಡ ಕೃಷಿ ಜ್ಞಾನವನ್ನು ತಮ್ಮ ನೆರೆಹೊರೆಯ ರೈತರಿಗೆ ಮಾಹಿತಿ ರೂಪದಲ್ಲಿ ತಿಳಿಸಿಕೊಡುತ್ತಾ ಬಂದಿದ್ದಾರೆ. ಇವರ ಸಾಧನೆಯನ್ನು ಜಿಲ್ಲಾ ಮಟ್ಟದಲ್ಲಿ ರೇಷ್ಮೆ ಕೃಷಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಇವರಿಗೆ ಹಲವು ಸಂಘ ಸಂಸ್ಥೆಗಳು ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಿವೆ.

ರೇಷ್ಮೆ ಕೃಷಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀಮತಿ ಬಸಮ್ಮ** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.



ಮೊದಲಿಗೆ ನನಗೆ ಕೃಷಿಯಲ್ಲಿ ಲಾಸ್ ಆಗಿತ್ತು. ಅನಂತರ ನಾನು ಎಚ್ಚೆತ್ತುಕೊಂಡು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದೇನೆ. ಯಾವುದೇ ಒಂದು ಬೆಳೆ ಕೈಕೊಟ್ಟರೂ ಮತ್ತೊಂದು ಬೆಳೆ ನನಗೆ ಹಿಡಿದು, ಲಾಭ ಕೊಟ್ಟಿದೆ. ವರ್ಷದಿಂದ ವರ್ಷಕ್ಕೆ ಲಾಭವನ್ನೇ ಕಾಣುತ್ತಿದ್ದೇನೆ ಎನ್ನುತ್ತಾರೆ ಮೊಹಮದ್ ಹನೀಫ್.


**ಶ್ರೀ ಮೊಹಮದ್ ಹನೀಫ್ ಕೆ. ಎಚ್.**
ಮೈಥಾಡಿ ಗ್ರಾಮ
ವಿರಾಜಪೇಟೆ ತಾಲ್ಲೂಕು
ಕೊಡಗು ಜಿಲ್ಲೆ
ಮೊಬೈಲ್ : 9448189515

# ಒಂದು ಬೆಳೆ ಕೈಕೊಟ್ಟರೂ ಇನ್ನೊಂದು ಬೆಳೆ ಕಯಹಿಡಿಯುತ್ತೆ

**ಶ್ರೀಯುತ ಮೊಹಮದ್ ಹನೀಫ್**

ಮೊದಲಿಗೆ ನನಗೆ ಕೃಷಿಯಲ್ಲಿ ಲಾಸ್ ಆಗಿತ್ತು. ಅನಂತರ ನಾನು ಎಚ್ಚೆತ್ತುಕೊಂಡು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದೇನೆ. ಯಾವುದೇ ಒಂದು ಬೆಳೆ ಕೈಕೊಟ್ಟರೂ ಮತ್ತೊಂದು ಬೆಳೆ ನನಗೆ ಹಿಡಿದು, ಲಾಭ ಕೊಟ್ಟಿದೆ. ವರ್ಷದಿಂದ ವರ್ಷಕ್ಕೆ ಲಾಭವನ್ನೇ ಕಾಣುತ್ತಿದ್ದೇನೆ ಎನ್ನುತ್ತಾರೆ ಮೊಹಮದ್ ಹನೀಫ್.

ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಮೈತಾಡಿ ಗ್ರಾಮದ ಶ್ರೀ ಮೊಹಮದ್ ಹನೀಫ್ ಕೆ.ಎಚ್. ರವರು ದುಬೈನಲ್ಲಿ ಸುಮಾರು 20ವರ್ಷಗಳ ಕಾಲ ಕೆಲಸದಲ್ಲಿದವರು. ಮೊದಲಿನಿಂದಲೂ ಕೃಷಿ ಮಾಡಬೇಕೆಂಬ ತುಡಿತ, ಕೃಷಿಯೆಡೆಗೆ ಆಕರ್ಷಿತರಾಗಿ ತಾಯ್ನಾಡಿಗೆ ಮರಳುವಂತೆ ಮಾಡಿತು. ತದನಂತರದಲ್ಲಿ ಇವರು ಕೃಷಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿ ಬಂದಿದ್ದಾರೆ. ಸಮಗ್ರ ಕೃಷಿ ಪದ್ಧತಿಯ ಪಾಲನೆಯ ಮೂಲಕ ಜಿಲ್ಲೆಯ ಮಾದರಿ ರೈತರಲ್ಲೊಬ್ಬರು ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇವರು ಕೃಷಿ ಚಟುವಟಿಕೆಯನ್ನು ಪ್ರಾರಂಭಿಸಿದಾಗಿನಿಂದ ಇಂದಿನವರೆಗೂ ಇವರು  ಕೃಷಿ ವಿಸ್ತರಣಾ ಘಟಕ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮತ್ತು ತೊಟಗಾರಿಕೆ, ಮೀನುಗಾರಿಕೆ ಪಶುಸಂಗೋಪನೆ ಮುಂತಾದ ಇಲಾಖೆಗಳೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದಾರೆ. ಕೃಷಿ ಮತ್ತು ತೋಟಗಾರಿಕೆಯಲ್ಲಿ ಹೊಸ ಹೊಸ ಮಾಹಿತಿಗಳನ್ನು ಪಡೆದು ಅದನ್ನು ತಮ್ಮ  ಜಮೀನಿನಲ್ಲಿ ಅಳವಡಿಸಿಕೊಳ್ಳುವ ಉತ್ಸುಕತೆಯನ್ನು ಇಂದಿಗೂ ಸಹ ಉಳಿಸಿಕೊಂಡಿರುತ್ತಾರೆ.

ಇವರ ತೋಟದಲ್ಲಿ ಕಾಫಿ, ಅಡಿಕೆ, ತೆಂಗು ಬೆಳೆಗಳಲ್ಲದೆ, ಬೆಣ್ಣೆಹಣ್ಣು, ಮಾವು, ಸೀಬೆ, ಸಪೋಟ, ಬಾಳೆ ಮುಂತಾದ  ಬೆಳೆಗಳನ್ನು ಬೆಳೆದು ಹೆಚ್ಚಿನ ಆದಾಯ ಪಡೆದುಕೊಳ್ಳುತ್ತಿದ್ದಾರೆ. ದೇಶಿ ಹಸುಗಳನ್ನು ಸಾಕಿಕೊಂಡು ಸ್ಥಳೀಯವಾಗಿ ಹಾಲು ಮಾರಾಟ ಮಾಡುತ್ತಿದ್ದು, ಮಿಕ್ಕಿದ ಹಾಲಿನಿಂದ ದೇಶಿ ಹಸುವಿನ ತುಪ್ಪವನ್ನು ಮಾಡಿಕೊಂಡು ಮಾರಾಟಮಾಡುವುದರ ಮುಖಾಂತರವೂ ತಮ್ಮ ಆದಾಯನ್ನು ವೃದ್ದಿಸಿಕೊಂಡಿದ್ದಾರೆ.

**ಜಾನುವಾರು ಸಾಕಣೆಯಲ್ಲಿ ವೈವಿಧ್ಯತೆ**

ಸಾಂಪಾಯರ್, ಮಲ್ಬಾರಿ ತಳಿಗಳ ಮೇಕೆ ಸಾಕಣೆ, 270–170 ವಿಸ್ತೀರ್ಣದಲ್ಲಿ ಗೆಂಡೆ, ರೂಹು, ಕಾಟ್ಲ ಬಾರೆ ಮೀನುಗಳನ್ನು ಸಾಕಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೆ ಮೊಲ ಹಾಗೂ ವಿವಿಧ ಜಾತಿಯ ಈಜಿಪ್ಷನ್ ಬ್ಯಾಂಡ್,

ಕಡಕ್‌ನಾಥ್, ಗಿರಿರಾಜ, ಸ್ವರ್ಣಮುಖಿ ಕೋಳಿಗಳನ್ನು ಸಾಕಿ ಮಾರಾಟ ಮಾಡುತ್ತಿದ್ದಾರೆ. ಪರ್ಷಿಯನ್ ಬೆಕ್ಕುಗಳನ್ನು ಸಾಕಿ ಇತರರಿಗೆ ಮಾರಾಟ ಮಾಡುತ್ತಿದ್ದಾರೆ. ರೂಟ್‌ವೀಲರ್, ಲ್ಯಾಬ್ರೆಡಾನ್ ಜಾತಿಯ ನಾಯಿಗಳನ್ನು ಸಾಕಿ ಮಾರಾಟ ಮಾಡುತ್ತಿದ್ದಾರೆ. ವಿವಿಧ ಬಗೆಯ ಜಾನುವಾರುಗಳನ್ನು ಸಾಕಣೆ ಮಾಡುವುದರಿಂದ ಇವರಿಗೆ ವರ್ಷಪೂರ್ತಿ ನಿರಂತರ ಆದಾಯವನ್ನು ದೊರಕಿಸಿಕೊಡುವಲ್ಲಿ ಸಹಾಯಕವಾಗಿವೆ.

ಜೇನು ಕೃಷಿಯಲ್ಲಿ ತರಬೇತಿ, ಪಡೆದು ಎರಡು ಜೇನು ಕುಟುಂಬಗಳಿಂದ ಜೇನು ಕೃಷಿ ಪ್ರಾರಂಭಿಸಿದ ಇವರು ಈಗ 20 ಜೇನು ಕುಟುಂಬಗಳನ್ನು ಹೊಂದಿದ್ದು ಕಾಫಿ ಮತ್ತು ಇತರೆ ಬೆಳೆಗಳ ಪರಾಗಸ್ಪರ್ಶಕ್ಕೆ ಜೇನು ನೊಣಗಳ ಪಾತ್ರ ಬಹಳ ಮುಖ್ಯವೆಂದು ಕಂಡುಕೊಂಡಿರುತ್ತಾರೆ. ತಮ್ಮಲ್ಲೇ ದೊರೆಯುವ ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಪದಾರ್ಥಗಳಿಂದ ಉತ್ತಮ ಕಾಂಪೋಸ್ಟ್ ತಯಾರಿಸಿಕೊಂಡು ತಮ್ಮ ಬೆಳೆಗಳಿಗೆ ಬಳಸಿಕೊಳ್ಳುತ್ತಿದಾರೆ. ಇದಲ್ಲದೇ ತಮ್ಮದೇ ನರ್ಸರಿಯನ್ನು ಹೊಂದಿದ್ದು ತಮಗೆ ಬೇಕಾಗುವ ಅಡಿಕೆ, ತೆಂಗು, ಕಾಳುಮೆಸು ಇತ್ಯಾದಿ ಸಸಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅಲ್ಲದೆ ಇತರೆ ರೈತರಿಗೂ ಮಾರಾಟ ಮಾಡುತ್ತಿದ್ದಾರೆ.

ಇವರ ಜಮೀನಿನಲ್ಲಿ ಕೃಷಿ ವಿಶ್ವವಿದ್ಯಾಲಯದವರು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ ಇತರೆ ರೈತರಿಗೆ ತಲುಪಿಸುವಲ್ಲಿ ಇವರು ಮುಂದಾಳತ್ವ ವಹಿಸಿರುತ್ತಾರೆ. ಇವರ ಜಮೀನಿನಲ್ಲಿಯೇ ಹುಲವಾರು ಪ್ರಾಯೋಗಿಕ ತಾಕುಗಳು ಇರುವುದರಿಂದ ಸುತ್ತಮುತ್ತಲಿನ ರೈತರಿಗೆ ತುಂಬಾ ಅನುಕೂಲವಾಗಿರುತ್ತದೆ.

ಇವರ ಜಮೀನಿನಲ್ಲಿ 14 ಮಂದಿ ಕಾಯಂ ಕೂಲಿ ಕಾರ್ಮಿಕರು ನೆಲೆಸಿದ್ದಾರೆ. ಇವರಿಗೆ ಉಳಿಯಲು ಮನೆ, ನೀರು, ವಿದ್ಯುತ್, ಆಸ್ಪತ್ರೆ ಖರ್ಚುಗಳೆಲ್ಲವನ್ನು ಇವರೇ ಭರಿಸುತ್ತಾರೆ. ಕೂಲಿ ಕಾರ್ಮಿಕರ ಮಕ್ಕಳ ಶಾಲಾ ಫೀಜುಗಳನ್ನು ಇವರೇ ಕಟ್ಟುತ್ತಾರೆ. ಬೆಳಿಗ್ಗೆ 6 ಗಂಟೆಯಿಂದ 8 ಗಂಟೆಯವರೆಗೆ ಹಾಗೂ ಸಂಜೆ 4.30ರ ನಂತರ ಹೆಚ್ಚುವರಿ ಕೆಲಸ ಮಾಡಿದರೆ ಅವರುಗಳಿಗೆ ಒಟಿ ಕೂಲಿಯನ್ನು ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಕೂಲಿ ಕಾರ್ಮಿಕರಿಗೆ ವರ್ಷಪೂರ್ತಿ ಕೆಲಸ ಇರುವಂತೆ ನೋಡಿಕೊಂಡಿದ್ದಾರೆ.

ಇವರ ಕೃಷಿ ಮತ್ತು ತೋಟಗಾರಿಕೆಯ ಸಾಧನೆಗೆ ಅರಸಿ ಬಂದಿರುವ ಪುರಸ್ಕಾರಗಳು ಹಲವು ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದಲ್ಲಿ, ವಿಜಯ

ಕರ್ನಾಟಕ ಪತ್ರಿಕೆಯ ಉತ್ತಮ ಕೃಷಿಕ ಪ್ರಶಸ್ತಿ, ಕೃಷಿ ಇಲಾಖೆಯ ಆತ್ಮ ಯೋಜನೆಯಡಿ, ಸಮಗ್ರ ಕೃಷಿ ಪ್ರಶಸ್ತಿ ಹಾಗೂ ಮಡಿಕೇರಿ ಆಕಾಶವಾಣಿಯಿಂದ ಕೃಷಿ ಸಾಧಕ ಪ್ರಶಸ್ತಿ ಇತ್ಯಾದಿಗಳು.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀ ಮೊಹಮದ್ ಹನೀಫ್ ಕೆ.ಎಚ್**. ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **"**ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023**"** ಅನ್ನು ನೀಡಿ ಗೌರವಿಸುತ್ತಿದೆ.

.



ಮದುವೆಯಾದರೆ ತಾನು ರೈತನನ್ನೇ ಮದುವೆಯಾಗುತ್ತೇನೆ ಎಂದು ತನ್ನ ಇಚ್ಛೆಯಂತೆ ಇವರು ಮದುವೆಯಾಗಿದ್ದಾರೆ. ತಾನು ಬೆಳೆದಂತಹ ಫಸಲನ್ನು ಕೊಟ್ಟು ತಿನ್ನುವ ಅಭ್ಯಾಸ ನಮ್ಮ ಮನೆಯಲ್ಲಿ ರಕ್ತಗತವಾಗಿ ಬೆಳೆದು ಬಂದಿದೆ. ಇವರು ಬೆಳೆದ ಹಲವು ಬಗೆಯ ತರಕಾರಿಗಳನ್ನು ತಮ್ಮ ನೆರೆಹೊರೆಯ ಜನರಿಗೆ ಹಾಗೂ ನೆಂಟರಿಷ್ಟರಿಗೆ ಕೊಟ್ಟು ತಿನ್ನುವುದರಿಂದ ನನಗೆ ಒಂದು ರೀತಿಯಲ್ಲಿ ಕೃಷಿ ಸಂತೃಪ್ತ ಭಾವ ನನಗೆ ಮೂಡುತ್ತದೆ ಎನ್ನುತ್ತಾರೆ ರೇವತಿಯವರು.

**ಶ್ರೀಮತಿ ರೇವತಿ ಸಿ. ಡಿ.**
ಕಿರಗೂರು ಗ್ರಾಮ
ಪೊನ್ನಂಪೇಟೆ ತಾಲ್ಲೂಕು
ಕೊಡಗು ಜಿಲ್ಲೆ
ಮೊಬೈಲ್ : 9448433249

## ಯಾವುದೇ ಬೆಳೆಗೆ ಬೆಲೆ ಸಿಕ್ಕಾಗ ಹೆಚ್ಚೆಚ್ಚು ಮಾಡಬೇಕು

**ಶ್ರೀಮತಿ ರೇವತಿ ಸಿ. ಡಿ.**

ಮದುವೆಯಾದರೆ ತಾನು ರೈತನನ್ನೇ ಮದುವೆಯಾಗುತ್ತೇನೆ ಎಂದು ತನ್ನ ಇಚ್ಛೆಯಂತೆ ಇವರು ಮದುವೆಯಾಗಿದ್ದಾರೆ. ತಾನು ಬೆಳೆದಂತಹ ಫಸಲನ್ನು ಕೊಟ್ಟು ತಿನ್ನುವ ಅಭ್ಯಾಸ ನಮ್ಮ ಮನೆಯಲ್ಲಿ ರಕ್ತಗತವಾಗಿ ಬೆಳೆದು ಬಂದಿದೆ. ಇವರು ಬೆಳೆದ ಹಲವು ಬಗೆಯ ತರಕಾರಿಗಳನ್ನು ತಮ್ಮ ನೆರೆಹೊರೆಯ ಜನರಿಗೆ ಹಾಗೂ ನೆಂಟರಿಷ್ಟರಿಗೆ ಕೊಟ್ಟು ತಿನ್ನುವುದರಿಂದ ನನಗೆ ಒಂದು ರೀತಿಯಲ್ಲಿ ಕೃಷಿ ಸಂತೃಪ್ತ ಭಾವ ನನಗೆ ಮೂಡುತ್ತದೆ ಎನ್ನುತ್ತಾರೆ ರೇವತಿಯವರು.

ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮದ ಶ್ರೀಮತಿ ರೇವತಿ ಸಿ. ಡಿ. ಯವರು ಬಿ.ಎ. ಪದವೀಧರೆಯಾಗಿದ್ದಾರೆ. ತನ್ನ ತವರಿನಲ್ಲಿದ್ದಾಗಲೇ ಹಸುಗಳ ಹಾಲು ಕರೆಯುವುದು, ಕಬ್ಬು ಬೆಳೆಯುವುದು ಮುಂತಾದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರು. ಮದುವೆಯ ನಂತರ ಕಳೆದ 15 ವರ್ಷಗಳಿಂದ ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಇವರು ತಮ್ಮ ತೋಟದಲ್ಲಿ ಕಾಫಿ, ಕಾಳುಮೆಣಸು, ಜೊತೆಗೆ ಅಡಿಕೆ, ತೆಂಗು, ಬೆಣ್ಣೆಹಣ್ಣು ಹಾಗೂ ಹಲವಾರು ವಿಧದ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅಲ್ಲದೆ ವಿವಿಧ ಬಗೆಯ ಸೊಪ್ಪಿನ ಬೆಳೆಗಳನ್ನು ಬೆಳೆದು ತರಕಾರಿಯಾಗಿ ಉಪಯೋಗಿಸುತ್ತಿದ್ದಾರೆ. ಬಾಳೆಯಲ್ಲಿ ಹಲವು ಬಗೆಯ ತಳಿಗಳನ್ನು ತಮ್ಮ ಜಮೀನಿನಲ್ಲಿ ಬೆಳೆಸಿದ್ದಾರೆ. ಗಮ್‌ಲೆಸ್ ಹಲಸು, ಕಾಫಿ, ಕಾಳುಮೆಣಸು, ಭತ್ತದ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಇವರು ಸಾವಯವ ಕೃಷಿಯಡೆಗೆ ಆಕರ್ಷಿತರಾಗಿರುವ ಇವರು, ತಮ್ಮ ಜಮೀನಿನಲ್ಲಿಯೇ ತಮ್ಮ ಬೆಳೆಗೆ ಸಾಕಾಗುವಷ್ಟು, ಕಾಂಪೋಸ್ಟ್ ಗೊಬ್ಬರ, ಎರೆಹುಳು ಗೊಬ್ಬರ ತಯಾರಿಸಿಕೊಳ್ಳುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಜಮೀನನ್ನು ಸಂಪೂರ್ಣವಾಗಿ ರಾಸಾಯನಿಕ ಮುಕ್ತವಾಗಿಸಿಕೊಂಡು, ಸಾವಯವ ಪದ್ಧತಿಗೆ ಅಳವಡಿಸಿಕೊಳ್ಳುವತ್ತ ಸಾಗಿದ್ದಾರೆ. ಸಾವಯವ ಕೃಷಿಗೆ ಪೂರಕವಾಗುವಂತೆ ಹಸು ಸಾಕಾಣೆಕೆಯನ್ನು ಮಾಡುತ್ತಿದ್ದು, ಹಸುವಿನ ಗಂಜಲ ಹಾಗೂ ಸಗಣಿಯನ್ನು ಬಹಳ ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಬೆಳೆಗಳ ಕೀಟರೋಗ ನಿಯಂತ್ರಣಕ್ಕಾಗಿ ಸಾಧ್ಯವಾದಷ್ಟು ಸ್ಥಳೀಯವಾಗಿ ದೊರೆಯುವ ಸಸ್ಯಗಳನ್ನೇ ಬಳಸಿಕೊಂಡು ಸಸ್ಯಜನ್ಯ ಪೀಡೆನಾಶಕಗಳನ್ನು ಬಳಸಿಕೊಳ್ಳುತ್ತಿರುವುದು ಇವರ ವಿಶೇಷತೆಯಾಗಿದೆ

ತಮ್ಮ ಮನೆಗೆ ಬೇಕಾಗುವಷ್ಟು ತರಕಾರಿ, ಸೊಪ್ಪು, ಅಣಬೆ ಇತ್ಯಾದಿಗಳನ್ನು ಬೆಳೆದುಕೊಳ್ಳುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆಯಾದಾಗ ತಮ್ಮ ಸುತ್ತಮುತ್ತಲಿನ ಜನರಿಗೆ ಮಾರಾಟಮಾಡಿ ಅದರಿಂದಲೂ ಉತ್ತಮ ಆದಾಯವನ್ನು ಇವರು ಪಡೆದುಕೊಳ್ಳುತ್ತಿದ್ದಾರೆ.

ಕೃಷಿಯ ಜೊತೆಗೆ ಉಪಕಸುಬಾಗಿ, ಮೀನುಸಾಕಣೆ, ಜೇನು ಕೃಷಿ, ಅಣಬೆ ಕೃಷಿ, ಕೋಳಿಸಾಕಣೆ ಇತ್ಯಾದಿಗಳನ್ನು ಸಹ ಇವರು ಅನುಸರಿಸುತಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಅಭಿವೃದ್ಧಿಪರ ಇಲಾಖೆಗಳ ಸಂಪರ್ಕದಲ್ಲಿದ್ದು, ಲಭ್ಯವಿರುವ ಸೌಲಭ್ಯಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳುತ್ತ, ತಮ್ಮ ನೆರೆಹೊರೆಯವರಿಗೂ ಕೃಷಿಯಲ್ಲಿ ಆಸಕ್ತಿ ಮೂಡಿಸುವ ಪ್ರಯತ್ನಗಳನ್ನು ಇವರು ಮಾಡುತ್ತಿದ್ದಾರೆ. ನೀರು ಸಂರಕ್ಷಣೆಯ ಬಗ್ಗೆ ಅರಿವು ಇರುವ ಇವರು ತಮ್ಮ ಜಮೀನಿನಲ್ಲಿ ಮಳೆಯ ನೀರನ್ನು ಸಾಧ್ಯವಾದಷ್ಟು ಹಿಡಿದಿಟ್ಟುಕೊಂಡು, ಬೇಸಿಗೆಯಲ್ಲಿ ಬಳಸಲು ಅನುಕೂಲವಾಗುವಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಕೃಷಿಯಲ್ಲಿ ಯಾವುದೇ ಬೆಳೆಗೆ ಬೆಲೆ ಸಿಕ್ಕಾಗ ಹೆಚ್ಚೆಚ್ಚು ಮಾಡಬೇಕು, ಕೂಲಿಕಾರ್ಮಿಕರು ಬಹಳ ಮುಖ್ಯ ಅವರನ್ನು ನಾವು ಚೆನ್ನಾಗಿ ನೋಡಿಕೊಳ್ಳಬೇಕು. ಕೂಲಿ ಕಾರ್ಮಿಕರಿದ್ದರೆ ಮಾಲೀಕರಿಗೆ ಆಸರೆಯಾಗುತ್ತಾರೆ. ತಾನು ತಿಳಿದು ಕೃಷಿ ಅನುಭವವನ್ನು ಇತರೆ ರೈತರಿಗೆ ತಿಳಿಸಿಕೊಡುತ್ತಾ ಬಂದಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಇವರು ಒಬ್ಬ ಮಾದರಿ ರೈತ ಮಹಿಳೆ ಎನ್ನಿಸಿಕೊಂಡಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀಮತಿ ರೇವತಿ ಸಿ. ಡಿ.** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **"**ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ-2023**"** ಅನ್ನು ನೀಡಿ ಗೌರವಿಸುತ್ತಿದೆ.



ನಾವು ಮಾಡುವ ಕೃಷಿ ಕಾಯಕದಲ್ಲಿ ಆಸಕ್ತಿ ಇರಬೇಕು. ನಾವು ಸೂಕ್ತ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿದರೆ ನಾವು ಏನು ಅಂದುಕೊಂಡಿದ್ದೇವೆಯೂ ಅದನ್ನು ಕೃಷಿಯಲ್ಲಿ ಪಡೆದುಕೊಳ್ಳಬಹುದು. ಈ ರೀತಿ ಮಾಡಿದಾಗ ಕೃಷಿಯಲ್ಲಿ ಲಾಸ್ ಅನ್ನೋದೇ ಇಲ್ಲ. ಆಯಾ ಸೀಸನ್ ತಕ್ಕ ಹಾಗೆ ಬೆಳೆಗಳನ್ನು ಬೆಳೆದು ಮಾರುಕಟ್ಟೆಗೆ ತರಬೇಕು. ಆಗ ಬೆಳೆದಿದ್ದೆಲ್ಲವೂ ಲಾಭದಾಯಕವಾಗುತ್ತದೆ ಎನ್ನುತ್ತಾರೆ ಶ್ರೀ ಪೂರ್ಣೇಶ್‌ರವರು.


**ಶ್ರೀ ಪೂರ್ಣೇಶ್ ಎಚ್. ಕೆ.**
ಬಿನ್ ಕೆಂಚಯ್ಯ
ಜಿ. ಹೊಸಹಳ್ಳಿ
ಗೋಣಿಬೀಡು ಹೋಬಳಿ
ಮೂಡಿಗೆರೆ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ
ಮೊಬೈಲ್ : 9449736878

# ಸೀಸನ್ ತಕ್ಕ ಹಾಗೆ ಬೆಳೆಗಳನ್ನು ಬೆಳೆಯಬೇಕು

**ಶ್ರೀ ಪೂರ್ಣೇಶ್ ಎಚ್. ಕೆ.**

ನಾವು ಮಾಡುವ ಕೃಷಿ ಕಾಯಕದಲ್ಲಿ ಆಸಕ್ತಿ ಇರಬೇಕು. ನಾವು ಸೂಕ್ತ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿದರೆ ನಾವು ಏನು ಅಂದುಕೊಂಡಿದ್ದೇವೆಯೊ ಅದನ್ನು ಕೃಷಿಯಲ್ಲಿ ಪಡೆದುಕೊಳ್ಳಬಹುದು. ಈ ರೀತಿ ಮಾಡಿದಾಗ ಕೃಷಿಯಲ್ಲಿ ಲಾಸ್ ಅನ್ನೋದೇ ಇಲ್ಲ. ಆಯಾ ಸೀಸನ್ ತಕ್ಕ ಹಾಗೆ ಬೆಳೆಗಳನ್ನು ಬೆಳೆದು ಮಾರುಕಟ್ಟೆಗೆ ತರಬೇಕು. ಆಗ ಬೆಳೆದಿದ್ದೆಲ್ಲವೂ ಲಾಭದಾಯಕವಾಗುತ್ತದೆ ಎನ್ನುತ್ತಾರೆ ಶ್ರೀ ಪೂರ್ಣೇಶ್‌ರವರು.

ಚಿಕ್ಕಮಗಳೂರು ತಾಲ್ಲೂಕು ಜಿ. ಹೊಸಹಳ್ಳಿ ಗ್ರಾಮದ ಶ್ರೀಯುತ ಪೂರ್ಣೇಶ್ ಎಚ್. ಕೆ ರವರು ಓದಿದ್ದು, ಪಿಯುಸಿ, ಹಲವು ಕಡೆ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅಪಾರ ಅನುಭವವನ್ನು ಗಳಿಸಿಕೊಂಡಿದ್ದಾರೆ. ಸರ್ಕಾರಿ ಇಲಾಖೆಯಾದ ಅಕ್ಷರಧಾರದಲ್ಲಿ ಸಂಯೋಜಕರಾಗಿ, ಜಂಟಿ ಅರಣ್ಯ ಸಮಿತಿ ಅಧ್ಯಕ್ಷರಾಗಿ, ಕೃಷಿ ಅನುವುಗಾರರಾಗಿ ರೈತರ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಪ್ರಧಾನ ಮಂತ್ರಿ ಯೋಜನೆಯಲ್ಲಿ ಕಾರ್ಯನಿರ್ವಹಿಸಿ ಅಪಾರವಾದ ಅನುಭವವನ್ನು ಗಳಿಸಿಕೊಂಡು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಇವರು ತಮ್ಮ 10 ಎಕರೆ ಜಮೀನಿನಲ್ಲಿ ಅಡಿಕೆ, ಕಾಫಿ, ಮೆಣಸು, ಬಾಳೆ, ಸಪೋಟ, ಹಾಗೂ ಅರಣ್ಯ ಮರಗಳನ್ನು ಬೆಳೆಯುತ್ತಿದ್ದಾರೆ. ಇವರು 2 ಎಕರೆ ಜಮೀನಿನಲ್ಲಿ ಹೆಚ್ಚು ಇಳುವರಿ ನೀಡುವ ಭತ್ತವನ್ನು ಬೆಳೆಯುತ್ತಿದ್ದಾರೆ. ಇದರಲ್ಲಿ ಒಂದು ಎಕರೆಗೆ 28 ಕ್ವಿ. ಇಳುವರಿಯನ್ನು ಪಡೆದು, ಕೃಷಿ ಇಲಾಖೆಯ ಪ್ರಶಸ್ತಿಯನ್ನು ಪಡೆದಿದ್ದಾರೆ.

ಶ್ರೀಯುತರು ಬೋರ್‌ವೆಲ್ ಮೂಲಕ ನೀರು ನಿರ್ವಹಣೆ ಮಾಡುತ್ತಿದ್ದಾರೆ. ಜೊತೆಗೆ ಲಘು ಪೋಷಕಾಂಶಗಳನ್ನು ಕೂಡ ನೀಡಿ ಸಮಗ್ರ ಪೋಷಕಾಂಶಗಳ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ತಮ್ಮ ಜಮೀನಿನಲ್ಲಿ 3 ಕೃಷಿಹೊಂಡ ನಿರ್ಮಿಸಿಕೊಂಡು, ಅದರಲ್ಲಿ ವಿವಿಧ ಜಾತಿಯ ಮೀನು ಸಾಕಾಣೆಯನ್ನು ಮಾಡುವುದರ ಜೊತೆಗೆ ವಾರ್ಷಿಕವಾಗಿ 50–75ಸಾವಿರದವರೆಗೆ ಲಾಭವನ್ನು ಪಡೆಯುತ್ತಿದ್ದಾರೆ. ಪ್ರಸ್ತುತ 04 ಹಸುಗಳನ್ನು ಸಾಕುತ್ತಿದ್ದು, ಪ್ರತಿ ನಿತ್ಯ 25 ಲೀ. ನಷ್ಟು ಉತ್ಪಾದನೆ ಮಾಡುತ್ತಿದ್ದು, ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ. ಇದರ ಜೊತೆಗೆ 150 ನಾಟಿ ಕೋಳಿಯನ್ನು ಸಾಕುತ್ತಿದ್ದು ಮಾರಾಟ ಹಾಗೂ ಸ್ವಂತ ಬಳಕೆಗೂ ಉಪಯೋಗಿಸುತ್ತಿದ್ದಾರೆ.

ಇವರ ಜಮೀನಿನಲ್ಲಿ ಎರಡು ಎರೆಹುಳುಗೊಬ್ಬರ ಘಟಕಗಳನ್ನು ಸ್ಥಾಪಿಸಿ ತೋಟದಲ್ಲಿ ದೊರೆಯುವ ಹಸಿರೆಲೆ ತ್ಯಾಜ್ಯವನ್ನು ಮತ್ತು ಸಗಣಿಯನ್ನು ಬಳಸಿಕೊಂಡು

ವರ್ಷಕ್ಕೆ ಸುಮಾರು 15 ಟನ್ ಕಾಂಪೋಸ್ಟ್‌ಅನ್ನು ಉತ್ಪಾದಿಸುತ್ತಿದ್ದಾರೆ.

ಕೃಷಿ ವಿಜ್ಞಾನ ಕೇಂದ್ರದಲ್ಲಿ ದೊರೆಯುವ ಜೈವಿಕ ಶಿಲೀಂಧ್ರಗಳಾದ ಟ್ರೈಕೋಡರ್ಮಾ ಮತ್ತು ಸುಡೋಮೊನಾಸ್‌ಅನ್ನು ಕಾಂಪೋಸ್ಟ್ ಗೊಬ್ಬರಕ್ಕೆ ಮಿಶ್ರಣಮಾಡಿ ತಮ್ಮ ತೋಟಕ್ಕೆ ಬಳಸುತ್ತಿದ್ದು, ಇದರಿಂದ ರೋಗ ನಿರ್ವಹಣೆಯಲ್ಲಿ ಯಶಸ್ಸು ಕಂಡಿದ್ದಾರೆ.

ಶ್ರೀಯುತರು ತೋಟಗಾರಿಕೆ ನರ್ಸರಿ ಮಾಡಿ ಸುಮಾರು 150ಕ್ಕೂ ತಳಿಗಳನ್ನು ಸಾಕಿದ್ದು, ತಮ್ಮ ಸುತ್ತಮುತ್ತಲಿನ ರೈತರಿಗೆ ಮಾರಾಟ ಮಾಡುತ್ತಿದ್ದಾರೆ. ಜಾನುವಾರು ಸಾಕಣೆಯಲ್ಲಿ ನಾಯಿಗಳನ್ನು ಸಾಕಿದ್ದು, ಉತ್ತಮ ವಿದೇಶಿ ತಳಿ ಡಾಗ್‌ಬ್ರೀಡಿಂಗ್ ಮಾಡುವುದರ ಮೂಲಕ ಹೆಚ್ಚುವರಿ ಆದಾಯ ಗಳಿಸುತ್ತ ಇತರ ರೈತರಿಗೆ ಮಾದರಿಯಾಗಿದ್ದಾರೆ.

ಇವರು ತಮ್ಮ ಜಮೀನಿನಲ್ಲಿ ಭತ್ತವನ್ನು ಬೆಳೆದು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇದರೊಟ್ಟಿಗೆ ಸಮಗ್ರ ಕೃಷಿ ಪದ್ಧತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡು, ವೈವಿಧ್ಯಮಯ ಬೆಳೆಗಳನ್ನು ಬೆಳೆದು ಕೃಷಿ ಇಲಾಖೆಯವತಿಯಿಂದ ಸಾಧನೆಯ ಸಾಧಕ ಪ್ರಶಸ್ತಿಯನ್ನು ಪಡೆದಿದ್ದಾರೆ. ಜಂಟಿ ಅರಣ್ಯ ಸಮಿತಿಯಲ್ಲಿದ್ದುಕೊಂಡು ಕಾಡಿನ ಬೆಂಕಿಯನ್ನು ನಂದಿಸಿದುದಕ್ಕೆ ಅರಣ್ಯ ಇಲಾಖೆಯವತಿಯಿಂದ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿರುತ್ತದೆ. ಅಲ್ಲದೆ ಇವರು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಇತರೆ ಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಶ್ರೀಯುತರು ಕೃಷಿ ಮತ್ತು ತೋಟಗಾರಿಕೆ ಹಾಗೂ ಸಮಗ್ರ ಕೃಷಿ ಪದ್ಧತಿ ಕುರಿತಂತೆ ವೈಜ್ಞಾನಿಕ ಮಾಹಿತಿಯನ್ನು ಪಡೆಯಲು ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆ, ನಿರಂತರ ಸಂಪರ್ಕ ಹೊಂದಿ, ಸಲಹೆ ಮತ್ತು ಮಾರ್ಗದರ್ಶನ ಪಡೆದು ನೂತನ ತಂತ್ರಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಅಲ್ಲದೆ ತಾವು ತಿಳಿದುಕೊಂಡ ತಾಂತ್ರಿಕ ಜ್ಞಾನವನ್ನು ತಮ್ಮ ಸುತ್ತಮುತ್ತಲಿನ ರೈತರಿಗೆ ಮಾಹಿತಿಯನ್ನು ನೀಡುತ್ತಾ, ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ. ಇವರು ಶ್ರೀ ಭೈರೇಶ್ವರ ರೈತ ಒಕ್ಕೂಟದ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಇವರು ಜಿಲ್ಲಾ ಕೃಷಿಕ ಸಮಾಜದಲ್ಲೂ ಸಕ್ರಿಯ ಸದಸ್ಯರಾಗಿ ರೈತರ ಸೇವೆಯಲ್ಲಿ ನಿರತರಾಗಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀ ಪೂರ್ಣೇಶ್ ಎಚ್. ಕೆ.** ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ **"ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023"** ಅನ್ನು ನೀಡಿ ಗೌರವಿಸುತ್ತಿದೆ.



ಕೃಷಿಗೆ ಹಾಕಿದ ಹಣ ಯಾವತ್ತೂ ವೇಸ್ಟ್ ಆಗಲ್ಲ. ಒಂದಲ್ಲಾ ಒಂದು ಸನ್ನಿವೇಶದಲ್ಲಿ ನಮಗೆ ಅದು ಬಡ್ಡಿ ಸಮೇತ ವಾಪಸ್ಸು ಕೊಡುತ್ತೆ. ಕೃಷಿಯಲ್ಲಿ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ಎಲ್ಲಾ ಒಳ್ಳೆಯದಾಗುತ್ತದೆ. ನಮ್ಮ ಜಮೀನಿನಲ್ಲಿ ಗಿಡಗಳನ್ನು ಮಕ್ಕಳು ಬೆಳೆಸಿದ ರೀತಿಯಲ್ಲಿ ಸಾಕಬೇಕು. ನಮ್ಮ ರೈತರು ಪ್ರತಿನಿತ್ಯ ನಿಷ್ಠೆಯಿಂದ ಬೆಳಿಗ್ಗೆ 5 ಗಂಟೆಗೆ ಎದ್ದು ತೋಟಕ್ಕೆ ಹೋಗಿ ಸಂಜೆ 6 ಗಂಟೆಯವರೆಗೆ ದುಡಿದರೆ ಖಂಡಿತ ಕೃಷಿ ಯಾವತ್ತೂ ನಮ್ಮ ಕೈ ಬಿಡುವುದಿಲ್ಲ ಎಂದು ಶ್ರೀಮತಿ ಶೈಲಜಾ ಅವರು ತಮ್ಮ ಅನುಭವದ ಮಾತನ್ನು ಹೇಳುತ್ತಾರೆ.


**ಶ್ರೀಮತಿ ಶೈಲಜ ಎಸ್.**
ಕಾರೇಹಳ್ಳಿ
ಸಖರಾಯಪಟ್ಟಣ
ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ
ಮೊಬೈಲ್ : 8310145221

# ಕೃಷಿಗೆ ಹಾಕಿದ ಹಣ ಯಾವತ್ತು ವ್ಯರ್ಥ ಆಗಲ್ಲ

**ಶ್ರೀಮತಿ ಶೈಲಜ ಎಸ್.**

ಕೃಷಿಗೆ ಹಾಕಿದ ಹಣ ಯಾವತ್ತೂ ವೇಸ್ಟ್ ಆಗಲ್ಲ. ಒಂದಲ್ಲಾ ಒಂದು ಸನ್ನಿವೇಶದಲ್ಲಿ ನಮಗೆ ಅದು ಬಡ್ಡಿ ಸಮೇತ ವಾಪಸ್ಸು ಕೊಡುತ್ತೆ. ಕೃಷಿಯಲ್ಲಿ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ಎಲ್ಲಾ ಒಳ್ಳೆಯದಾಗುತ್ತದೆ. ನಮ್ಮ ಜಮೀನಿನಲ್ಲಿ ಗಿಡಗಳನ್ನು ಮಕ್ಕಳು ಬೆಳೆಸಿದ ರೀತಿಯಲ್ಲಿ ಸಾಕಬೇಕು. ನಮ್ಮ ರೈತರು ಪ್ರತಿನಿತ್ಯ ನಿಷ್ಠೆಯಿಂದ ಬೆಳಿಗ್ಗೆ 5 ಗಂಟೆಗೆ ಎದ್ದು ತೋಟಕ್ಕೆ ಹೋಗಿ ಸಂಜೆ 6 ಗಂಟೆಯವರೆಗೆ ದುಡಿದರೆ ಖಂಡಿತ ಕೃಷಿ ಯಾವತ್ತೂ ನಮ್ಮ ಕೈ ಬಿಡುವುದಿಲ್ಲ ಎಂದು ಶ್ರೀಮತಿ ಶೈಲಜಾ ಅವರು ತಮ್ಮ ಅನುಭವದ ಮಾತನ್ನು ಹೇಳುತ್ತಾರೆ.

ಚಿಕ್ಕಮಗಳೂರು ಜಿಲ್ಲೆ ಕಾರೆಹಳ್ಳಿ ಗ್ರಾಮದ ಶ್ರೀಮತಿ ಶೈಲಜರವರು ಕಳೆದ 15 ವರ್ಷಗಳಿಂದ ಕೃಷಿ ತೊಡಗಿಸಿಕೊಂಡಿದ್ದಾರೆ. ತನ್ನ ತಂದೆಯವರ ಮನೆಯಲ್ಲೂ ಬಾಲ್ಯದ ದಿನಗಳಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಮದುವೆಯ ನಂತರದಲ್ಲು ತನ್ನ ಪತಿಯೊಂದಿಗೆ ಕೃಷಿಯಲ್ಲಿ ಸಂಪೂರ್ಣವಾಗಿ, ಅನುಸರಿಸುತ್ತಾ ಬಂದಿದ್ದಾರೆ. ತಮ್ಮ 6ಎಕರೆ ಜಮೀನಿನಲ್ಲಿ ಅಡಿಕೆ, ತೆಂಗು, ಕಾಫಿ, ಏಲಕ್ಕಿ, ಮೆಣಸು, ಬಾಳೆ, ಸಪೋಟ, ಹಲಸು, ನುಗ್ಗೆ, ಪರಂಗಿ, ಸೀಬೆ ಹಾಗೂ ಮಾವು ಬೆಳೆಗಳನ್ನು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ ಬೆಳೆಯುತ್ತಿದ್ದಾರೆ.

ಇವರು ಕೃಷಿಯೊಂದಿಗೆ ಹಲವು ಉಪಕಸುಬುಗಳನ್ನು ಮಾಡುತ್ತಿದ್ದು, 20 ಹಸುಗಳನ್ನು ಸಾಕಿ ಹೈನುಗಾರಿಕೆ ಮಾಡುತ್ತಿದ್ದಾರೆ. ಹಸುಗಳಿಂದ ದೊರೆಯುವ ಸಗಣಿ ಗೊಬ್ಬರವನ್ನು ತಮ್ಮ ಜಮೀನಿಗೆ ಬಳಸಿಕೊಂಡು ಸಾವಯವ ಕೃಷಿಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇದರ ಜೊತೆಗೆ 100 ನಾಟಿಕೋಳಿಗಳ ಸಾಕಾಣಿಕೆ ಮಾಡಿ ಮಾರಾಟ ಮಾಡಿ ಲಾಭ ಪಡೆಯುತ್ತಿದ್ದಾರೆ. ತಮ್ಮ ಕೃಷಿಹೊಂಡದಲ್ಲಿ ಮೀನುಸಾಕಣೆ ಮಾಡಿ ಇದರಿಂದಲೂ ಆದಾಯವನ್ನು ಪಡೆಯುತ್ತಿದ್ದಾರೆ.ಕೃಷಿ ಹಾಗೂ ಜೇನು ಸಾಕಾಣಿಕೆ ಹಾಗೂ ತೋಟಗಾರಿಕೆ ನರ್ಸರಿಗಳನ್ನೊಳಗೊಂಡಂತೆ ವೈವಿಧ್ಯಮಯವಾದ ಬೆಳೆಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರುತ್ತಾರೆ.

ಇವರು ತಮ್ಮ ಕೃಷಿಗೆ ಎರೆ ಹುಳುಗೊಬ್ಬರ ಹಾಗೂ ಕಾಂಪೋಸ್ಟ್ ಗೊಬ್ಬರವನ್ನು ತಮ್ಮ ಜಮೀನಿನಿಂದ ಬರುವ ಕೃಷಿ ತ್ಯಾಜ್ಯದಿಂದ ತಯಾರಿಸಿ ಬೆಳೆಗಳಿಗೆ ಉಪಯೋಗಿಸುತ್ತಿದ್ದು, ಜಮೀನಿನಲ್ಲಿ ಎರಡು ಎರೆಹುಳುಗೊಬ್ಬರ ಘಟಕಗಳನ್ನು ಸ್ಥಾಪಿಸಿ ತೋಟದಲ್ಲಿ ದೊರೆಯುವ ಹಸಿರೆಲೆ ತ್ಯಾಜ್ಯವನ್ನು ಮತ್ತು ಸಗಣಿಯನ್ನು ಬಳಸಿಕೊಂಡು ವರ್ಷಕ್ಕೆ ಸುಮಾರು 15 ಟನ್ ಕಾಂಪೋಸ್ಟ್‌ಅನ್ನು ಉತ್ಪಾದಿಸುತ್ತಿದ್ದಾರೆ.

ಅಲ್ಲದೆ ಕೃಷಿವಿಜ್ಞಾನ ಕೇಂದ್ರದಲ್ಲಿ ದೊರೆಯುವ ಜೈವಿಕ ಶಿಲೀಂಧ್ರಗಳಾದ ಟ್ರೈಕೋಡರ್ಮಾ ಮತ್ತು ಸುಡೊಮೊನಾಸ್‌ನ್ನು ಕಾಂಪೋಸ್ಟ್ ಗೊಬ್ಬರಕ್ಕೆ ಮಿಶ್ರಣ ಮಾಡಿ ಮಣ್ಣಿನ ಫಲವತ್ತತೆ ಹೆಚ್ಚಿಸುವುದರ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿಕೊಂಡು ಹೆಚ್ಚಿನ ಆದಾಯವನ್ನು ಗಳಿಸುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಬೆಳೆದಿರುವ ಸೀಬೆ ಮರದ ಎಲೆಗಳನ್ನು ಸ್ಟಾರ್ ಹರ್ಬಲ್ ಕಂಪನಿಗೆ ಔಷಧಿ ತಯಾರು ಮಾಡಲು ಮಾರಾಟ ಮಾಡುವುದರ ಮೂಲಕ ಹೆಚ್ಚುವರಿ ಆದಾಯ ಗಳಿಸುತ್ತಿದ್ದಾರೆ.

ಶ್ರೀಮತಿ ಶೈಲಜಾ ಅವರು ಕೃಷಿ ಮತ್ತು ತೋಟಗಾರಿಕೆ ಹಾಗೂ ಸಮಗ್ರ ಕೃಷಿ ಪದ್ಧತಿ ಕುರಿತಂತೆ ವೈಜ್ಞಾನಿಕ ಮಾಹಿತಿಯನ್ನು ಪಡೆಯಲು ಕೃಷಿ ವಿಜ್ಞಾನಕೇಂದ್ರ, ಮೂಡಿಗೆರೆಗೆ ನಿರಂತರ ಸಂಪರ್ಕಹೊಂದಿ, ಸಮಗ್ರ ಕೃಷಿ ಪದ್ಧತಿಯ ಬಗ್ಗೆ ಸಲಹೆ ಮತ್ತು ಮಾರ್ಗದರ್ಶನ ಪಡೆದು ನೂತನ ತಂತ್ರಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡಿರುತ್ತಾರೆ. ಅಲ್ಲದೆ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ತಮ್ಮ ಜಮೀನಿನಲ್ಲಿ ಹೆಚ್ಚಿನ ಇಳುವರಿ ಹಾಗೂ ಆದಾಯವನ್ನು ಗಳಿಸಿ ಇತರ ರೈತಮಹಿಳೆಯರಿಗೆ ಮಾದರಿಯಾಗಿರುತ್ತಾರೆ. ಇವರ ವಾರ್ಷಿಕ ಆದಾಯ ಸರಾಸರಿ 15–20 ಲಕ್ಷಗಳಾಗಿರುತ್ತದೆ. ಇವರು ಕೃಷಿ ಇಲಾಖೆಯ ತಾಲ್ಲೂಕು ಮಟ್ಟದ ಪ್ರಗತಿಪರ ರೈತಮಹಿಳಾ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲದೆ ತಾವು ತಿಳಿದುಕೊಂಡ ತಾಂತ್ರಿಕ ಜ್ಞಾನವನ್ನು ತಮ್ಮ ಸುತ್ತಮುತ್ತಲಿನ ರೈತರಿಗೆ ಮಾಹಿತಿಯನ್ನು ನೀಡುತ್ತಾ, ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು **ಶ್ರೀಮತಿ ಶೈಲಜ ಎಸ್**. ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2023" ಅನ್ನು ನೀಡಿ ಗೌರವಿಸುತ್ತಿದೆ.





**ವಿಸ್ತರಣಾ ನಿರ್ದೇಶನಾಲಯ**

**ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ**

Ptd @ Malnad, SMG. 94497 95464